# ಅಪರಂಜಿ

ತಿಳಿನಗೆಯ ಕಾರಂಜಿ



ಅಕ್ಟೋಬರ್ - 2012





# ಅಪರಂಜಿ



ತಿಳಿನಗೆಯ ಕಾರಂಜಿ


ಸಂಪಾದಕ ಮಂಡಳಿ

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ





ಸಂಪುಟ 30
ಸಂಚಿಕೆ - 1
ಅಕ್ಟೋಬರ್ - 2012


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಮೈ ಎಕ್ಸ್‌ಪೆರಿಮೆಂಟ್... | **ಬಿ.ಕೆ. ಗಣೇಶ್** | 5 |
| ದಸರೆಯ ಉತ್ಸವದತ್ತ... | **ಬೇಲೂರು ರಾಮಮೂರ್ತಿ** | 7 |
| ಚೊಂಬೂ ಸವಾರಿ | **ಸಿ.ಆರ್. ಸತ್ಯ** | 11 |
| ಅಂತಿಂಥ ಗೊಂಬೆ.... | **ಎನ್. ರಾಮನಾಥ್** | 16 |
| ಬನ್ನಿ ಬಂಗಾರವಾಗುವ.. | **ಭೂಮಿತಾಯಿ** | 20 |
| ಆಯುಧ ಪೂಜೆ.... | **ಕೃಷ್ಣ ಸುಬ್ಬರಾವ್** | 23 |
| ತುಂತುರು | **ದಂನಾಳ** | 26 |
| ಗೂಡು ಸೇರು.... | **ವಾಣೀ ಸುರೇಶ್** | 27 |
| ಬರ ದರ್ಶನ | **ಇ.ಆರ್. ರಾಮಚಂದ್ರನ್** | 30 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 32 |
| ಗೋವಿಂದಾಯ ನಮಃ | **ಅನಿತಾ ನರೇಶ್ ಮಂಚಿ** | 36 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**


*ಮುದ್ರಣ :* ರವಿ ಗ್ರಾಫಿಕ್ಸ್ - *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ರಾಜಕೀಯವಾಗಿ ಹಿಂದುಳಿದವರನ್ನು ಗುರುತಿಸಲು ಸೂಚನೆ – ಸುದ್ದಿ

**● ಅಂತಹವರೂ ಇದ್ದಾರೇನು !!**

★★★

ನ್ಯಾಯಾಂಗ ದೇಶ ಆಳಬಾರದು – ಶ್ರೀ ಕಪಾಡಿಯಾ

**● ಹೌದು, ಅವರದ್ದೇ ಕಷ್ಟಗಳು ಬೇಕಾದಷ್ಟು ಇವೆ !!**

★★★

ರೆಡ್ಡಿ ಜಾಮೀನು ಲಂಚ ಪ್ರಕರಣ : ಒಪ್ಪಿದ್ದು 20 ಕೋಟಿ, ಕೊಟ್ಟಿದ್ದು 9.5 ಕೋಟಿ – ಪತ್ರಿಕೆ

**● ಅಲ್ಲೂ ಭಾರೀ ಮೋಸ !!**

★★★

''ಕಾವ್ಯವನ್ನು ಆಸಕ್ತಿಯಿಂದ ಓದಬೇಕು'' – ಹೇಳಿಕೆ

**● ಅಯ್ಯೋ, ಟೈಮಿಲ್ಲ ಸಾರ್ !!**

★★★

ಲಂಚಕೋರ ರಾಜಕಾರಣಿಗಳನ್ನು ಉಗ್ರರು ಎಂದು ಕರೆಯಬಾರದೇಕೆ?

**● ಎಂದು ಅಪರಂಜಿ ಕೇಳಿದಳಂತೆ !!**

★★★

**Higgs Boson** ಎಂದು ದೇವಕಣವನ್ನು ಕರೆಯುವುದನ್ನು ಭಾರತದ ವಿಜ್ಞಾನಿಗಳು ಖಂಡಿಸಿದ್ದಾರೆ – ಸುದ್ದಿ

**● ತೀರ ಸಣ್ಣ ಕಣ ತಾನೆ, ಹೋಗಲಿಬಿಡಿ !!**

★★★

ಮಾನವೀಯತೆಯನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ – ಹೇಳಿಕೆ

**● ದೊಡ್ಡವರ ಮೇಲ್ಪಂಕ್ತಿ್ನ!!**

★★★


# “ನಮ್ಮ ನಿಮ್ಮಲ್ಲಿ”

I asked a little bird, "why are your songs so short?"

She said, "Because I have too many songs to sing"

**ಸ**ಣ್ಣಕಥೆಗಳ ಪ್ರಸ್ತುತತೆಯ ಬಗ್ಗೆ ಮಾತನಾಡುತ್ತಾ ಖ್ಯಾತ ಬರಹಗಾರ್ತಿ ಶಶಿ ದೇಶಪಾಂಡೆಯವರು ಹೇಳಿದ ಮಾತುಗಳಿವು. ಸಂದರ್ಭ, ಶ್ರೀನಿವಾಸ ವೈದ್ಯರ ''ಕಪ್ಪೆ ನುಂಗಿದ ಹುಡುಗ'' ಪುಸ್ತಕದ ಬಿಡುಗಡೆ ಸಮಾರಂಭ. ಮೊನ್ನೆ ಭಾನುವಾರದಂದು ಅಂಕಿತ ಪುಸ್ತಕದ ಪ್ರಕಾಶ್ ಏರ್ಪಡಿಸಿದ್ದ ಈ ಪುಟ್ಟ ಸಮಾರಂಭಕ್ಕೆ ಗೆಳೆಯ ಶರಣ್ ಜೊತೆ ಹೋಗಿದ್ದೆ. ಹತ್ತೂವರೆಗೆ ಪ್ರಾರಂಭವಾಗುವ ಕಾರ್ಯಕ್ರಮಕ್ಕೆ ತಕ್ಕಮಟ್ಟಿಗೆ ಮುಂಚಿತವಾಗಿಯೇ ಹೋಗಿದ್ದೆವು. ಬಸವನಗುಡಿಯ ವರ್ಲ್ಡ್ ಕಲ್ಚರ್ ಸಭಾಂಗಣದ ಹೊರ ಆವರಣದಲ್ಲಿ ನಿಂತು, ಆ ಮೋಡ ಕವಿದ ಬೆಳಗಿನಲ್ಲಿ ಬಿಸಿ ಕಾಫಿ ಹೀರುತ್ತಾ ಹಳೆಯ ಗೆಳೆಯರೊಡನೆ ಹರಟುವ ಖುಷಿಯನ್ನು ಯಾರಾದರೂ ತಪ್ಪಿಸಿಕೊಳ್ಳುತ್ತಾರೆಯೇ? ಅಲ್ಲದೇ ಅಂದಿನ ಭಾಷಣಕಾರರೆಲ್ಲಾ ತಮ್ಮ ಭಾಷಣವನ್ನು ಕ್ಲಪ್ತಕಾಲದಲ್ಲಿ ಮುಗಿಸುವ ಕಲೆಯನ್ನು ಕರಗತ ಮಾಡಿಕೊಂಡವರೆಂಬ ಅಂಶ ಆವರಣದಲ್ಲಿದ್ದ ಭಾವೀ ಸಭಿಕರಿಗೆ ಸಾಮೂಹಿಕವಾಗಿ ಹೊಳೆದು ಅಲ್ಲಿ ಒಂದು ನಿರಾತಂಕದಿಂದ ತೊಯ್ದ ಆಹ್ಲಾದಕರ ವಾತಾವರಣ ಮೂಡಿತ್ತು.

ಬಿಡುಗಡೆಯಾದ ಪುಸ್ತಕ ಐದು ನೀಳ್ಗತೆಗಳ ಸಂಕಲನ. ಮೊದಲ ಕಥೆ ''ಕೆಲವಂ ಬಲ್ಲವರಿಂದ'' ಬಹು ಚೆನ್ನಾಗಿ ವೈದ್ಯರ ವಿಶಿಷ್ಟ ಛಾಪನ್ನು ಪ್ರತಿಬಿಂಬಿಸುತ್ತದೆ. ಹುಡುಗ ಪುಟ್ಟನ (ಅಥವಾ ಧಾರವಾಡದ ಪುಟ್ಯಾನ) ಶಾಲೆಯ ದಿನಗಳು, ಅವನ ಸರಸ ಸುಂದರ ಮುಗ್ಧ ಜೀವನದಲ್ಲಿ ಕ್ರಮೇಣ ಅರಳುವ ಲೈಂಗಿಕತೆಯ ಮೊಗ್ಗು ವೈದ್ಯರ ಲೇಖನಿಯಿಂದ ಬಹು ಸಂವೇದನಾಶೀಲವಾಗಿ ಮೂಡಿಬಂದಿದೆ. ''ಉದ್ಯೋಗ ಪರ್ವ'' ಎಂಬ ಕಥೆಯಲ್ಲಿ ಒಬ್ಬ ಮಧ್ಯಮ ಹಂತದ ಆಡಳಿತವರ್ಗದ ಮೇನೇಜರ್‌ನ ಉದ್ಯೋಗ ಜೀವನದಲ್ಲಿ ಅವನಿಗೆದುರಾಗುವ ಸಂದಿಗ್ಧಗಳು, ಅವನ್ನು ನಿಭಾಯಿಸಲು ಅವನು ತನ್ನ ಮೌಲ್ಯಗಳೊಂದಿಗೆ ಮಾಡಿಕೊಳ್ಳಬೇಕಾದ ರಾಜಿಗಳು ಇವನ್ನು ವೈದ್ಯರು ತಮ್ಮ ಎಂದಿನ ಟಂಗ್ ಇನ್ ಛೀಕ್ ರೀತಿಯ ಹಾಸ್ಯದ ಲೇಪದೊಂದಿಗೆ ವಿವರಿಸಿದ್ದಾರೆ. ''ಕಬಡ್ಡಿ ಕಬಡ್ಡಿ'' ಕಥೆ ಇಂದಿನ ನಮ್ಮ ಸಮಾಜದ ಯಾವುದೇ ಹಿರಿಯ ಪ್ರಜೆ ಬಹು ಮುಕ್ತವಾಗಿ ತನ್ನನ್ನು ತಾನು ಕಾಣಬಹುದಾದ ಕನ್ನಡಿಯಂತಹ ಕಥೆ. ಶಿರಹಟ್ಟಿ ಮಾಸ್ತರ ಪಾಡನ್ನು ನಾವೆಲ್ಲರೂ ಎಂದಾದರೊಂದು ಬಾರಿ ಎಲ್ಲಾದರೂ ಒಂದು ಕಡೆ ಅನುಭವಿಸಿಯೇ ಇರುತ್ತೇವೆ. ನಮ್ಮ ಇಂದಿನ ಸಂವೇದನಾ ರಹಿತ




ಸಮಾಜ ನಿಸ್ಸಹಾಯಕ ಹಿರಿಯರೊಂದಿಗೆ ಆಡುವ ಕಬಡ್ಡಿ ಆಟ ಈ ಕಥೆಯಲ್ಲಿ ಚೆನ್ನಾಗಿ ಹೆಣೆದು ಬಂದಿದೆ. ''ಕಪ್ಪೆ ನುಂಗಿದ ಹುಡುಗ'' ಕಥೆಯೂ ಸಹ ಒಬ್ಬ ಬ್ಯಾಂಕ್ ಮ್ಯಾನೇಜರ್ ತನ್ನ ಕೆಲಸದ ಪರಿಸರದ survival of the meanest ಎಂಬ ಆಟದಲ್ಲಿ ಹೆಣಗಿ ಸೋತು ಬೆಳಕು ಕಾಣುವ ವಿಶಿಷ್ಟ ಕಥೆ. ನಿಸ್ಸಂಶಯವಾಗಿ ಈ ಕಥೆ ಈ ಸಂಕಲನದ ಅತಿ ಮುಖ್ಯ ಕಥೆಯೂ ಕೂಡ. ಮಾನವೀಯ ಮೌಲ್ಯಗಳನ್ನು ಬಹು ಕಲಾತ್ಮಕವಾಗಿ ಅನುಭವ ರೂಪದಲ್ಲಿ ನಿರೂಪಿಸುವ ''ತರಬೇತಿ ದಿನಗಳು'' ಓದುಗನ ಮನಕ್ಕೆ ಮುದ ನೀಡುತ್ತದೆ.

ಪುಸ್ತಕವನ್ನು ಬಿಡುಗಡೆ ಮಾಡಿದ ಗಿರೀಶ್ ಕಾರ್ನಾಡರು ತಮ್ಮ ಭಾಷಣದಲ್ಲಿ ''ವೈದ್ಯರ ಲೇಖನಿಯಿಂದ ಇನ್ನೂ ಇಂತಹ ಅನೇಕ ಕಲಾತ್ಮಕ ಪುಸ್ತಕಗಳು ಮೂಡಿಬರಲಿ'' ಎಂಬ ಮಾತುಗಳನ್ನು ಹೇಳಿದರು. ಈ ಮಾತನ್ನು ನಾನೂ ಸಹ ಹೃತ್ಪೂರ್ವಕವಾಗಿ ಅನುಮೋದಿಸುವೆ.

**ಶಿವಕುಮಾರ್**

ಪುಸ್ತಕ: ಕಪ್ಪೆ ನುಂಗಿದ ಹುಡುಗ – ಪ್ರಕಾಶಕರು: ಅಂಕಿತ ಪುಸ್ತಕ – ಬೆಲೆ: ರೂ. 80/–

## ದಯವಿಟ್ಟು ಗಮನಿಸಿ

**ನಮ್ಮ ಸಂಪರ್ಕದ ಈ ಮೇಲ್** aparanji@hotmail.com **ಸಂಪೂರ್ಣವಾಗಿ ರದ್ದಾಗಿದೆ. ಅದು** hack **ಆಗಿರುವುದರಿಂದ ಆ ಐಡಿ ಗೆ ಯಾವ ಪತ್ರವ್ಯವಹಾರವನ್ನೂ ಮಾಡಬೇಡಿ.**

**ನಮ್ಮ ಹೊಸ ವಿಳಾಸ koravanji42@hotmail.com**

*– ಸಂಪದಾಕರು ಅಪರಂಜಿ*

# ಮೈ ಎಕ್ಸ್‌ಪೆರಿಮೆಂಟ್ ವಿತ್ ಟ್ರುತ್-2

## (ಎಂಜಿ ರಸ್ತೆಯ ಗಾಂಧಿ ಪ್ರತಿಮೆಯ ಸ್ವಗತ)

**- ಬಿ.ಕೆ. ಗಣೇಶ್**

**ಮಿ. ಗಾಂಧಿ** ಅಗತ್ಯ ನಮಗೆ ಈಗ ಹಿಂದಿಗಿಂತ ಹೆಚ್ಚಿದೆ. ಅವರು ಇನ್ನಷ್ಟು ಹೆಚ್ಚಿನ ಜವಾಬ್ದಾರಿಯನ್ನು ಹೊರಲು ಇದು ಸಕಾಲ ಎಂಬ ಮಾತು ಕೇಳಿದಾಗ ನನಗೆ ಅದೆಷ್ಟು ಖುಷಿಯಾಗಿತ್ತು....

ನಾನು ಇಂಥದ್ದೊಂದು ಘಟನೆಯನ್ನು ಎಂದಿಗೂ ನಿರೀಕ್ಷಿಸಿರಲಿಲ್ಲ. ನನ್ನ ಈ ದೇಶದಲ್ಲಿ ನಾನೊಬ್ಬ ಕೇವಲ ಪ್ರತಿಮೆಯಾಗುತ್ತೇನೆ; ಪ್ರತಿಷ್ಠಿತ ರಸ್ತೆಗೆ ಹೆಸರಾಗಿ ಮಾತ್ರ ಉಳಿಯುತ್ತೇನೆ ಎಂದು ಭಾವಿಸಿರಲಿಲ್ಲ. ಇದು ವಿಧಿಬರಹವೇ ಇರಬೇಕು.

ನಾನು ಇಲ್ಲಿ ಹೇಳಹೊರಟಿರುವುದೂ ಅದನ್ನೇ. ಇಷ್ಟೂ ವರ್ಷ ಇಲ್ಲಿ ಕಲ್ಲಾಗಿ ಕೂತ ನನ್ನಲ್ಲೂ ಒಮ್ಮೊಮ್ಮೆ ಭಾವನೆಗಳು ವಿಪರೀತಕ್ಕೆ ಹೋಗುತ್ತದೆ. ಕಲ್ಲಿನ ಹೃದಯ ಕರಗಿಬಿಡುತ್ತದೆ. ಕಣ್ಣೀರಾಗಿ ಹೊರಬರುತ್ತದೆ. ರಾತ್ರಿ ಎಷ್ಟೋ ಸಲ ಕಣ್ಣೀರಿಟ್ಟಿದ್ದನ್ನು ಯಾರೂ ನೋಡಿಲ್ಲ. ಏಕೆಂದರೆ ಮರುದಿನ ಅದು ಬಿಸಿಲಿಗೆ ಒಣಗಿಯೋ, ಮಳೆಗೆ ಲೀನವಾಗಿಯೋ ಹೋಗಿಬಿಡುತ್ತದೆ. ಅಲ್ಲದೆ, ನನ್ನ ಕಣ್ಣೀರನ್ನು ನೋಡುವಷ್ಟು ವ್ಯವಧಾನ ಯಾರಿಗೂ ಇಲ್ಲ.

ನಾನೊಬ್ಬ ರಾಷ್ಟ್ರಪಿತ ಎಂದು ನೀವು ಕೊಂಡಾಡಿದ್ದೀರಿ. ನನಗೆ ಅದರ ಅಗತ್ಯವೇನಿಲ್ಲ. ನಾನು ಅದನ್ನು ಬಯಸಿಯೂ ಇಲ್ಲ. ಆದರೆ ಯಾರೋ ಒಬ್ಬ ಪುಣ್ಯಾತ್ಮ ಆರ್‌ಟಿಐ ಮೂಲಕ ಮಾಹಿತಿ ಕೇಳಿದಾಗ, ಮಹಾತ್ಮ ಗಾಂಧೀಜಿ ಅವರು ರಾಷ್ಟ್ರಪಿತ ಎನ್ನಲು ನಮ್ಮಲ್ಲಿ ಯಾವುದೇ ಆಧಾರಗಳಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಇದು ನನಗೆ ಅಚ್ಚರಿಯನ್ನೇನೂ ತಂದುಕೊಟ್ಟಿಲ್ಲ. ಮಹಾತ್ಮ ಗಾಂಧೀಜಿ ಎನ್ನುವುದು ಇವತ್ತು ಸವಕಲು ಪದವಾಗಿದೆ ಎನ್ನುವುದನ್ನು ನಾನು ಚೆನ್ನಾಗಿ ಬಲ್ಲೆ.



ಅವತ್ತು ನನಗೆ ಇನ್ನೊಂದು ಶಾಕ್ ಆಯಿತು. ನಮ್ಮ ಪ್ರಧಾನಿ ಮನಮೋಹನ್ ಸಿಂಗ್ ಅವರು ಒಂದು ಸಂದರ್ಭದಲ್ಲಿ ಮಾತನಾಡುತ್ತ, ''ಮಿ. ಗಾಂಧಿ ಅಗತ್ಯ ನಮಗೆ ಈಗ ಹಿಂದಿಗಿಂತ ಹೆಚ್ಚಿದೆ. ಅವರು ಇನ್ನಷ್ಟು ಹೆಚ್ಚಿನ ಜವಾಬ್ದಾರಿಯನ್ನು ಹೊರಲು ಇದು ಸಕಾಲ'' ಎಂದು ಹೇಳಿದ್ದರು. ಕಲ್ಲಾಗಿರುವ ನಾನು ಆಕಾಶದಲ್ಲಿ ತೇಲುತ್ತಿದ್ದೇನೋ ಎಂದೆನಿಸಿಬಿಟ್ಟಿತು. ಬಹುಶಃ ಈಚೆಗಿನ ದಿನಗಳಲ್ಲಿ ಅಷ್ಟೊಂದು ಖುಷಿ ನನಗಾಗಿರಲಿಲ್ಲ.

ಇಂದಿನ ದಿನಗಳಲ್ಲೂ ನಾನು ಪ್ರಸ್ತುತ ಎಂಬರ್ಥದ ಪ್ರಧಾನಿ ಮಾತು ನನ್ನಲ್ಲಿ ಹೊಸ ಪುಳಕು ಉಂಟುಮಾಡಿತ್ತು. ಬಹುಶಃ ನಾನು ಕಲ್ಲಾಗದೇ ಉಳಿದಿದ್ದರೆ ಎದ್ದುಕೊಂಡು ಹೊರಟೇಬಿಡುತ್ತಿದ್ದೇನೇನೋ ಯಾವುದಾದರೂ ಪಾದಯಾತ್ರೆಗೆ. ಮರುದಿನ ದಿಗ್ವಿಜಯ ಸಿಂಗ್ ಎಂಬವರು ಮಾತನಾಡಿ, ಪ್ರೈಮ್ ಮಿನಿಸ್ಟ್ರು ಹೇಳಿದ್ದರಲ್ಲಿ ಅರ್ಥವಿದೆ; ರಾಹುಲ್ ಗಾಂಧೀಜಿ ಅವರು ಪ್ರಧಾನಿಯಾಗಬೇಕು ಎಂದು ಹೇಳಿದ್ದರು.

ನನ್ನ ಉತ್ಸಾಹವೆಲ್ಲ ಜರ್‍ರನೆ ಇಳಿದುಹೋಯಿತು. ರಾಹುಲ್ ಪ್ರಧಾನಿಯಾಗಬೇಕು ಎಂಬ ಆಗ್ರಹಕ್ಕೆ ನನ್ನ ಉತ್ಸಾಹ ಇಳಿದಿಲ್ಲ; ನನಗೆ ಮನ್ನಣೆ ಸಿಕ್ಕಿಲ್ಲ ಎಂಬ ಕಾರಣಕ್ಕೆ ನಾನು ಕಂಗೆಟ್ಟಿಲ್ಲ. ಆದರೆ ಇವತ್ತು ಆಧುನಿಕ ಭಾರತದಲ್ಲಿ ಮಿ. ಗಾಂಧಿ ಎಂದರೆ ನಾನಲ್ಲ ಎಂದು ಕೇಳಿ ಕೊಂಚ ಬೇಸರವಾಯಿತು.

ಇರಲಿ ಬಿಡಿ. ಕನಿಷ್ಠ ಕಲ್ಲಾಗಿಯಾದರು ನಾನು ಹೋರಾಟ, ಧರಣಿ, ಪ್ರತಿಭಟನೆಗಳಿಗೆ ಆಸರೆ ಕೊಡುತ್ತಿದ್ದೇನಲ್ಲ ಎನ್ನುವುದೇ ನನ್ನ ಹೆಮ್ಮೆ. ಆದರೆ ಎಷ್ಟೋ ಸಲ ನನ್ನ ಬಳಿಗೆ ಬಂದು ಹೋರಾಟ ಮಾಡುವವರ ಸ್ಥಿತಿ, ಅವರ ಬೇಡಿಕೆ ನೋಡಿದರೆ ಮರುಕ ಉಂಟಾಗುತ್ತದೆ. ಅಧಿ ಕಾರ ಬೇಕು ಎಂದು ಆರಂಭಿಸಿ ಸಂಬಳ ಹೆಚ್ಚು ಮಾಡಿ ಎನ್ನುವ ಹಲವು ಬೇಡಿಕೆಗಳವರೆಗೆ ವಿವಿಧ ವರ್ಗಗಳ ಜನ ಧರಣಿ ಮಾಡುತ್ತಾರೆ. ಇವರಿಗೆಲ್ಲ ಎಷ್ಟು ನ್ಯಾಯ ಸಿಗುತ್ತದೋ ಎನ್ನುವುದು ಬೇರೆ ಮಾತು. ಭ್ರಷ್ಟಾಚಾರ ಆರೋಪ ಹೊತ್ತವರೂ ನನ್ನೆದುರು ಬಂದು ಧರಣಿ ಮಾಡುತ್ತಾರೆ. ನಿತ್ಯವೂ ಅಪ್ರಾಮಾಣಿಕತೆಯನ್ನು ಮೆರೆಯುವವರು ಬಂದು ನನ್ನೆದುರು ಸತ್ಯಸಂಧರಂತೆ ಮಾತನಾಡುವಾಗ ಮನಕಲಕುತ್ತದೆ.

ನಿಜಕ್ಕೂ ನತದೃಷ್ಟರ ನೋವಿಗೆ ಸ್ಪಂದಿಸಲಾಗದೆ ಕಲ್ಲಾಗಿಬಿಟ್ಟೆನಲ್ಲ ಎಂದು ಎಷ್ಟೋ ಸಲ ಅನ್ನಿಸುತ್ತದೆ. ಆದರೆ, ನನ್ನನ್ನು ಬರೇ ವಿಳಾಸವಾಗಿ ಜನ ಪರಿಗಣಿಸುತ್ತಿದ್ದಾರೆಯೇ ಹೊರತು ನನ್ನೊಳಗಿನ ಆದರ್ಶಗಳಿಗೆ ಮನ್ನಣೆ ಕೊಡದೆ ಇರುವುದನ್ನು ನೋಡಿದರೆ ನಾನು ಕಲ್ಲಾಗಿದ್ದೇ ಒಳ್ಳೆಯದಾಯಿತು ಅನ್ನಿಸುತ್ತದೆ.

## ಉಳಿದದ್ದು ಎಲ್ಲಿ?

ಅಣ್ಣಾ ಹಜಾರೆ ಇದ್ದ ಸಭೆಯೊಂದರಲ್ಲಿ ಮಂತ್ರಿಗಳೊಬ್ಬರು ಒಬ್ಬ ಯುವ ರಾಜಕಾರಣಿಯನ್ನು ಹೊಗಳುತ್ತಾ ಈ ಕಥೆ ಹೇಳಿದರು. ಒಬ್ಬಾತ ತನ್ನ ಮೂವರು ಮಕ್ಕಳಿಗೆ ತಲಾ ನೂರು ರೂಪಾಯಿ ಕೊಟ್ಟು ಅದರಿಂದ ಏನಾದರೂ ತಂದು ಕೊಠಡಿಯನ್ನು ಭರ್ತಿಮಾಡಲು ಹೇಳಿದ. ಒಬ್ಬ ನೂರು ರೂ.ಗೆ ಹುಲ್ಲು ತಂದ. ಕೊಠಡಿ ತುಂಬಲಿಲ್ಲ. ಇನ್ನೊಬ್ಬ ಹತ್ತಿ ತಂದ. ಸಾಕಾಗಲಿಲ್ಲ. ಮೂರನೆಯವ ಬರೇ ಒಂದು ರೂಪಾಯಿಗೆ ಒಂದು ಕ್ಯಾಂಡಲ್ ತಂದು ಹಚ್ಚಿದಾಗ ಇಡೀ ಕೊಠಡಿ ಬೆಳಗಿತು. ''ನೋಡಿ, ನಮ್ಮ ಯುವ ರಾಜಕಾರಣಿ ಮೂರನೆಯ ಮಗನಂತೆ. ಅವರು ರಾಜಕಾರಣಕ್ಕೆ ಬಂದಮೇಲೆ ಇಡೀ ದೇಶವೇ ಪ್ರಕಾಶಿಸುತ್ತಿದೆ'' ಎಂದಾಗ ಅಣ್ಣಾ ಎದ್ದು ನಿಂತು ಉಳಿದ 99 ರೂಪಾಯಿ ಏನಾಯಿತು ಅಂತ ಕೇಳಬೇಕೆ?

# ದಸರೆಯ ಉತ್ಸವದತ್ತ ಒಂದು ಇಣುಕು ನೋಟ

**- ಬೇಲೂರು ರಾಮಮೂರ್ತಿ**

**ನ**ವರಾತ್ರಿ – ವಿಜಯದಶಮಿಯ ಮುಖ್ಯ ಆರಾಧ್ಯ ದೇವತೆ ಆದಿಶಕ್ತಿಯೇ ಆಗಿದ್ದಾಳೆ. ಈ ಆದಿಶಕ್ತಿಯೇ ಮಹಿಷಾಸುರಮರ್ಧಿನಿ. ಮಹಿಷಾಸುರ ರಾಕ್ಷಸನ ಉಪಟಳವನ್ನು ತಡೆಯಲಾರದ ದೇವಾಧಿದೇವತೆಗಳು ಆತನನ್ನು ನಾಶಪಡಿಸಬೇಕೆಂದು ಆದಿಶಕ್ತಿಯನ್ನು ವಿನಂತಿಸಿಕೊಳ್ಳುತ್ತಾರೆ. ಆಗ ಆದಿಶಕ್ತಿ ಸಾಗರವನ್ನೇ ಗುಟುಕರಿಸಿಬಿಡುವಂತಹ, ಪರ್ವತಶಿಖರಗಳನ್ನೇ ಕಿತ್ತೆಸೆದುಬಿಡುವಂತಹ, ಭಯವನ್ನೇ ಅಂಜಿಸಿಬಿಡುವಂತಹ ಭಯಂಕರ ರೂಪವನ್ನು ಧರಿಸಿ ಮಹಿಷಾಸುರನ ಮೇಲೆ ನುಗ್ಗಿಹೋಗುತ್ತಾಳೆ. ಒಂಭತ್ತು ದಿನ ಹಗಲಿರುಳೂ ಕಾಳಗ ನಡೆಯುತ್ತದೆ. ಆಶ್ವೀಜ ಶುದ್ದ ದಶಮಿಯಂದು ಆದಿಶಕ್ತಿಗೆ ಗೆಲುವು ದೊರೆಯುತ್ತದೆ. ಅಂದೇ ವಿಜಯದಶಮಿ.

ಇದು ದಸರೆಯ ಹಿನ್ನೆಲೆಯ ಪೌರಾಣಿಕ ಕಥೆ. ನಮ್ಮಲ್ಲಿರುವ ಶಕ್ತಿ – ಮೋಹರೂಪದ ಮಹಿಷಾಸುರನ ಜೊತೆ ಹೋರಾಡಿ ವಿವೇಕದ ವಿಜಯವನ್ನು ಸಂಪಾದಿಸಿ ಒಂದು ಬಗೆಯ ಸೀಮೋಲ್ಲಂಘನೆಯನ್ನೇ ಮಾಡಿದ ಮಾನವ ವಿಜಯವೇ ವಿಜಯದಶಮಿ. ಅದನ್ನೇ ನಮ್ಮ ಪೂರ್ವಜರು ಸಂಕೇತಪೂರ್ಣವಾಗಿ ಶಕ್ತಿದೇವತೆಯ ಮುಖಾಂತರ ಹೇಳಿಕೊಟ್ಟಿದ್ದಾರೆ. ಈ ಶಕ್ತಿದೇವತೆಯ ಹೋರಾಟಕ್ಕೆ ಒಂಭತ್ತೇ ದಿನಗಳ ಯೋಜನೆಯನ್ನು ಏಕೆ ಹಾಕಿದರು ಎಂಬುದರ ಗುಟ್ಟು ನಮ್ಮ ವಿದ್ವಾಂಸರನ್ನೂ ಬೆರಗುಗೊಳಿಸುವಂತಹುದು. ನಮ್ಮ ಸಂಖ್ಯಾ ಶಾಸ್ತ್ರದಲ್ಲಿ ಒಂಭತ್ತು ಅಂಕೆಗೆ ಇರುವಷ್ಟು ಮಹತ್ವ ಮತ್ತೊಂದಕ್ಕಿಲ್ಲ. ಇದರಲ್ಲಿ ಇನ್ನುಳಿದ ಯಾವ ಅಂಕೆಯೂ ಸಮಾವೇಶಗೊಳ್ಳಬಲ್ಲದು. ಆದರೆ ಇನ್ನುಳಿದ ಯಾವ ಸಂಖ್ಯೆಯಲ್ಲಿಯೂ ಇದು ಸಮಾವೇಶಗೊಳ್ಳಲಾರದು. ಹಾಗೆಯೇ ಆದಿಶಕ್ತಿಯ ಅಮಿತ ಆಕಾರದಲ್ಲಿ ಇಡೀ ವಿಶ್ವ ಸಮಾವೇಶಗೊಳ್ಳಬಹುದೇ ವಿನಾ ವಿಶ್ವದ ಯಾವುದೇ ವಸ್ತುವಿನಲ್ಲಿ ಆದಿಶಕ್ತಿ ಸಮಾವೇಶಗೊಳ್ಳಲಾರಳು. ಸಿಂಧುವಿನಲ್ಲಿ ಬಿಂದು ಅಡಕವಾಗಬಹುದು. ಆದರೆ ಬಿಂದುವಿನಲ್ಲಿ ಸಿಂಧುವನ್ನು ಹಿಡಿದಿಡುವುದು ಅಸಾಧ್ಯ. ಒಂಭತ್ತು ಅಂಕೆ–ಪೂರ್ಣಾಂಕ. ಅದೊಂದು ಅದ್ವೈತದ ದ್ಯೋತಕ. ಜಗತ್ ಪ್ರಾರಂಭದಲ್ಲಿ 'ಏಕಬ್ರಹ್ಮ'ನಿಗೆ ಅನೇಕವಾಗುವ ಇಚ್ಛೆಯಾಗುತ್ತದೆ. ಅಲ್ಲಿಂದ ಪ್ರಾರಂಭವಾಯಿತು ಜಗತ್ತಿನ ಜೀವರಾಶಿ. ಈ ರೀತಿಯಾಗಿ ಅದ್ವೈತದ ಅಂಕೆ 9 ದ್ವೈತದಲ್ಲಿ ಕಾಲಿರಿಸಿತು. 9ರ ಅಂಕೆ ಗುಣಕವನ್ನು ಪಡೆಯತೊಡಗಿತು. 9ಕ್ಕೆ ಯಾವುದೇ ಅಂಕೆಯಿಂದ ಗುಣಿಸಿದರೂ ಬರುವ ಅಂಕೆಗಳ ಮೊತ್ತ ಪುನಃ ಒಂಭತ್ತೇ ಆಗುತ್ತದೆ. ಉದಾಹರಣೆಗೆ:

9 X 2 = 18 (1 + 8 = 9) 9 X 3 = 27 (7 + 2 = 9)

9 X 4 = 36 (3 + 6 = 9) 9 X 5 = 45 (4 + 5 = 9)

9 X 6 = 54 (5 + 4 = 9) 9 X 7 = 63 (6 + 3 = 9)

9 X 8 = 72 (7 + 2 = 9) 9 X 9 = 81 (1 + 8 = 9)

9 X 10 = 90 (9 + 0 = 9)

ಈ ರೀತಿಯಾಗಿ 9 ತನ್ನ ಅಸ್ತಿತ್ವವನ್ನು ಅಬಾಧಿತವಾಗಿರಿಸಿಕೊಂಡು ಪೂರ್ಣತ್ವವನ್ನು ಪಡೆಯಿತು.

ದಸರೆಯ ಉತ್ಸವಕ್ಕೆ ಶಮಿಯ ನಂಟೂ ಉಂಟು. ವಿಜಯದ ಸಂಕೇತ ಶಮಿ. ಅಂತಲೇ ವಿಜಯದ ಶಮಿಯೇ ವಿಜಯದಶಮಿಯಾಗಿದೆ. ಶಮಿಯ (ಬನ್ನಿಯ) ಎಲೆಗಳನ್ನು ಸುವರ್ಣವೆಂದು ಬಗೆದು ಪರಸ್ಪರ ಹಂಚುವ ಪದ್ಧತಿಯೂ ರೂಢಿಯಲ್ಲಿದೆ. ಈ ಬಗೆಯ ಸುವರ್ಣ ಹಂಚುವ ಪದ್ಧತಿ ರಘುವಂಶದ ರಾಜರಿಂದ ಪ್ರಾರಂಭವಾಯಿತು. ಅಲ್ಲಿಂದಲೇ ಶಮಿವೃಕ್ಷದ ಪೂಜೆಯೂ ಪ್ರಾರಂಭವಾಯಿತು. ಶಮಿಗೆ ನಮ್ಮ ಆಯುರ್ವೇದದಲ್ಲಿಯೂ ಪ್ರಮುಖ ಸ್ಥಾನವಿದೆ. ಅದರಲ್ಲಿ ನಂಜುನಾಶದ ಸಾಮರ್ಥ್ಯವಿದೆ (Antiseptic) ದಸರೆಯ ದಿನದಂದು ಪಠಿಸುವ ಮಂತ್ರದಲ್ಲಿ ಶಮಿಯ ಮಹತ್ವವನ್ನು ತಿಳಿಸಲಾಗಿದೆ.

ಶಮಿ ಶಮಯತೆ ಪಾಪಂ, ಶಮಿ ಲೋಹಿತ ಕಂಟಕಾ

ಧಾರಿಣ್ಯಾರ್ಜುನ ಬಾಣಾನಾಂ ರಾಮಸ್ಯ ಪ್ರಿಯವಾದಿನಿ

ಕರಿಷ್ಯಮಾನಯಾತ್ರಾಯಾಂ ಯಥಾಕಾಲ ಸುಖಂ ಮಯಾ

ತತ್ರ ನಿರ್ವಿಘ್ನಂ ಕರ್ತ್ರೀತ್ವಂ ಶ್ರೀ ರಾಮ ಪೂಜಿತೆ.

ಶಮಿ ಪಾಪವನ್ನು ಹೋಗಲಾಡಿಸುತ್ತದೆ. ಶಮಿಯ ಮುಳ್ಳುಗಳು ಕಂದು ಬಣ್ಣವನ್ನು ಹೊಂದಿರುತ್ತವೆ. ಶಮಿ ರಾಮನಿಗೆ ಪ್ರಿಯವಾದದ್ದು. ಅರ್ಜುನನ ಬಾಣದ ತೀವ್ರತೆ ಅದಕ್ಕಿದೆ. ಹೇ ಶಮಿ, ರಾಮ ನಿನ್ನ ಪೂಜೆಯನ್ನು ಮಾಡಿದ್ದಾನೆ. ನಾನು ಯೋಗ್ಯವೇಳೆಯಲ್ಲಿ ಸೀಮೋಲ್ಲಂಘನೆಗೆ ಹೊರಡಲಿದ್ದೇನೆ. ಈ ಯಾತ್ರೆಯನ್ನು ನಿರ್ವಿಘ್ನವಾಗಿಸಿ, ಸುಖಕರವಾಗುವಂತೆ ಮಾಡು ಎಂಬುದು ಈ ಶ್ಲೋಕದ ಅರ್ಥ.

ವಿಜಯದಶಮಿಯಂದೇ ಸೀಮೋಲ್ಲಂಘನೆ ಮಾಡುವ ಪರಿಪಾಠ ಹಿಂದಿನಿಂದಲೂ ನಡೆದುಬಂದಿದೆ. ಹಿಂದಿನ ಕಾಲದ ರಾಜರು ವಿಜಯದಶಮಿಯಂದು ಸಾಂಕೇತಿಕವಾಗಿ ಸೀಮೋಲ್ಲಂಘನೆ ಮಾಡುತ್ತಿದ್ದರು. ಅಪರಾಹ್ನ ಕಾಲದಲ್ಲಿ ತಮ್ಮ ಊರಿನ ಸೀಮೆಯನ್ನು ಈಶಾನ್ಯ ದಿಕ್ಕಿನಲ್ಲಿ ದಾಟಿ ಅಲ್ಲಿರುವ ಬನ್ನಿಮರದ ಪೂಜೆಯನ್ನು ಮಾಡಿ, ಮೇಲ್ಕಾಣಿಸಿದ ಶಮಿ ಸ್ತೋತ್ರವನ್ನು ಪಠಿಸಿ ಮರಳಿ ಬರುವ ಪದ್ಧತಿ ಇತ್ತು. ಅಪರಾಜಿತೆ ಪೂಜೆಯೂ ದಸರೆಯ ಒಂದು ಕ್ರಮವಾಗಿದೆ. ಸೀಮೋಲ್ಲಂಘನ ಮಾಡಿ ಬನ್ನೀಮರದ ಬಳಿ ಮರದ ಪೂಜೆ ಮಾಡಿದ ಬಳಿಕ, ಅದರ ಬಳಿಯಲ್ಲಿಯೇ ಭೂಮಿಯ ಮೇಲೆ ಅಷ್ಟದಳಗಳನ್ನು ಕೊರೆದು ಅದರ ಮೇಲೆ ಅಪರಾಜಿತೆಯ (ಸೋಲರಿಯದ) ಮೂರ್ತಿಯನ್ನು ಇರಿಸಿ ಮಂತ್ರ ಪಠನ ಮಾಡುತ್ತಾ ಮೂರ್ತಿಯ ಪೂಜೆಯನ್ನು ಮಾಡುತ್ತಿದ್ದರು.

ವಿಜಯನಗರದ ಪತನಾನಂತರ ಶ್ರೀರಂಗಪಟ್ಟಣದಲ್ಲಿದ್ದ ರಾಯ ಪ್ರತಿನಿಧಿಗಳಿಂದ ಶ್ರೀರಂಗಪಟ್ಟಣದ ಸಿಂಹಾಸನವನ್ನು ಪಡೆದ ರಾಜ ಒಡೆಯರು ಮೈಸೂರನ್ನು ಬಿಟ್ಟು ಶ್ರೀರಂಗಪಟ್ಟಣವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಒಡೆಯರ ಮನೆತನಕ್ಕೆ ಇದು ಸೀಮೋಲ್ಲಂಘನ.

ರಾಜ ಒಡೆಯರಿಗೆ ಸ್ಫೂರ್ತಿ ನೀಡಿದ್ದು ವಿಜಯನಗರದ ನವರಾತ್ರಿ ಹಬ್ಬ. ಅದನ್ನೇ ಅವರು ತಮ್ಮದೇ ಆದ ಕ್ರಮಬದ್ಧ ರೀತಿಯಲ್ಲಿ ಆಚರಿಸಿ ತಮ್ಮ ನಂತರ ಬರಬಹುದಾದ ಒಡೆಯರುಗಳು ಇದೇ ರೀತಿ ನವರಾತ್ರಿ ದಸರೆಯನ್ನು ಆಚರಿಸಬೇಕೆಂದು ಕಟ್ಟಪ್ಪಣೆಯನ್ನು ಮಾಡಿಟ್ಟರು. ಶ್ರೀಮನ್ಮಮಹಾರಾಜರ ವಂಶಾವಳಿಯಲ್ಲಿ (1929 – ಪುಟ 40) ಈ ವಿಷಯವಾಗಿ ''ಈ ಮೇರೆಗೆ ನವರಾತ್ರಿ ಉತ್ಸವವು ತಮ್ಮ ವಂಶಪಾರಂಪರ್ಯವಾಗಿ ನಡೆಯುವಂತೆ ನಿಬಂಧನೆ ಮಾಡಿ ಈ ವಿವರಗಳನ್ನೆಲ್ಲ ಅರಮೆಯಯ ಆಯಕಟ್ಟಿನ ಕರಣಿಕನ ಕಡತಕ್ಕೆ ಬರೆಯಿಸಿ ಆಯುಧ, ಸಿಂಹಾಸನ, ಪಟ್ಟದ ಕುದುರೆ, ಪಟ್ಟದಾನೆ ಇವುಗಳಿಗೆ ಪ್ರತಿನಿತ್ಯವೂ ಪೂಜೆ ನಡೆಯುವಂತೆಯೂ, ರಂಗಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ತಾವು ಹೊಸದಾಗಿ ಕಟ್ಟಿಸಿದ ಅರಮನೆಯ ಸಜ್ಜೆಯ ಮೇಲೆ ಈ ಪರಿಯಾಗಿ ಓಲಗಂ ಬೆಳೆಯುವಂತೆಯೂ ಮತ್ತು ಪ್ರತಿ ಶುಕ್ರವಾರದ ರಾತ್ರಿಯಲ್ಲಿಯೂ ಓಲಗಂ ಬೆಳೆಯುವಂತೆಯೂ ಕಟ್ಟಪ್ಪಣೆ ಮಾಡಿಸಿದರು'' ಎಂದು ಹೇಳಿದೆ.

ರಾಜ ಒಡೆಯರಿಂದ ಪ್ರಾರಂಭವಾದ ನವರಾತ್ರಿ ಉತ್ಸವಕ್ಕೆ ಬಹಳ ಹಿಂದಿನ ಚರಿತ್ರೆಯಿದ್ದರೂ ಮೈಸೂರಿನಲ್ಲಿ ನಡೆದ ಪ್ರಥಮ ದಸರೆ ಸುಮಾರು 211 ವರ್ಷಗಳ ಹಿಂದೆ, ಅಂದರೆ 1799ನೇ ಮೇ 4ರಂದು ನಡೆದ ನಿರ್ಣಾಯಕ ಯುದ್ಧದಲ್ಲಿ ಟಿಪ್ಪುಸುಲ್ತಾನ ಮಡಿದ ನಂತರ ಒಡೆಯರ ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಪುನಃ ಮೈಸೂರಿಗೆ ವರ್ಗಾಯಿಸಿದ ನಂತರವೇ ದಸರಾ ಉತ್ಸವಗಳು ಪ್ರಾರಂಭವಾದವು. ಅಂದರೆ, 30ನೇ ಜೂನ್ 1799 ಭಾನುವಾರ ರೋಹಿಣಿ ನಕ್ಷತ್ರದ ದಿವಿ 15 ಘಳಿಗೆಗೆ ಸಂದ ಕನ್ಯಾ ಲಗ್ನದಲ್ಲಿ ಮೈಸೂರಿನ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ (ಆಗಿನ್ನೂ ಮೈಸೂರಿನಲ್ಲಿ ಅರಮನೆ ಇರಲಿಲ್ಲ) ಕೇವಲ 5 ವರ್ಷದ ಕುವರ ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನಾರೋಹಣ ಮಾಡಿದರು. ಅದೇ ವರ್ಷದ ನವರಾತ್ರಿ ಉತ್ಸವವನ್ನು ಪ್ರಪ್ರಥಮ ಬಾರಿಗೆ ಆಚರಿಸಲಾಯಿತು. ಈ ದಸರೆಯ ಉತ್ಸವದಲ್ಲಿ ಈ ಬಾಲರಾಜನನ್ನು (ಮುಮ್ಮಡಿ ಕೃಷ್ಣರಾಜ ಒಡೆಯರನ್ನು) ಭಟ್ಟಂಗಿಗಳು ಉಗ್ಗಡಿಸಿದ ರೀತಿ ಹೀಗಿತ್ತು.

ಶ್ರೀಮತ್ ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ, ಕರ್ನಾಟಕ ಜನಪದ ಸಂಪದ ದೀಕ್ಷಾನಭೂತ ಶ್ರೀಮನ್ ಮೈಸೂರ ಸಂಸ್ಥಾನ ಮಧ್ಯ ದೇದೀಪ್ಯಮಾನಾವಿಕಲ ಕಲಾನಿಧಿ, ಕುಲಕ್ರಮಾಗತ ರಾಜ ಕ್ಷಿತಿಪಾಲ ಪ್ರಮುಖ ನಿಳಿಕ ರಾಜಾಧಿ ರಾಜ, ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯ ರತ್ನಸಿಂಹಾಸನಾರೂಢ ಶ್ರೀಮದ್ ರಾಜಾಧಿರಾಜ ರಾಜ ಪರಮೇಶ್ವರ ಪ್ರೌಶಪ್ರತಾಪಾತಪ್ರತಿಮ ವೀರ ನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃ ಪಾರಾವಾರ ಕಲಾನಿಧಿ ಶಂಖ

ಚಕ್ರಾಂಕುಶ ಕುಠಾರ ಮಕರ, ಮತ್ಸ ಶರಭ ಸಾಳ್ವ ಗಂಡಬೇರುಂಢ ಧರಣೀ ವರಾಹ ಹನುಮದ್ ಗರುಡ ಕಂಠೀರ ವಾದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನೀ ಕೆಂಪನಂಜಮಾಂಬ ಗರ್ಭಸುಧಾಂಬುದಿರಾಕ, ಸುಧಾ ಕರಾಯಮಾಣ ಶ್ರೀ ಚಾಮುಂಡಿ ವರಪ್ರಸಾದೋದ್ಭವ ಶ್ರೀಮನ್ ಮೈಸೂರು ಪುರಾಧೀಶ. ಇದೊಂದು ಕುತೂಹಲಪೂರ್ಣ ಉಗ್ಗಡಿಕೆ. ಸ್ವಾಮಿಗಳನ್ನು ಜಗತ್ ಗುರು ಎಂದು ಕರೆದಂತೆ, ಒಂದು ಸಣ್ಣ ಭೂಭಾಗದ – ಅದೂ ಆಂಗ್ಲರ ಸಂರಕ್ಷಣೆಗೆ ಒಳಪಟ್ಟ ಸಂಸ್ಥಾನಿಕರನ್ನು ಸಮಸ್ತ ಭೂಮಂಡಲ ಮಂಡನಾಯಮಾನ ಚಕ್ರವರ್ತಿ ಎಂದು ಕರೆದದ್ದೂ ಸೋಜಿಗದ ಸಂಗತಿ.

ವಿಜಯದಶಮಿ ಭಾರತದ ಸಾರ್ವತ್ರಿಕ ಹಬ್ಬಗಳಲ್ಲಿ ಒಂದಾಗಿದೆ. ಎಲ್ಲ ಜಾತಿಯ ಜನರೂ ಈ ಹಬ್ಬವನ್ನು ಆಚರಿಸುತ್ತಾರೆ. ವಿಜಯದ ಹಾಗೂ ಪರಾಕ್ರಮದ ಹಬ್ಬ ಇದು ಎಂದು ಮೊದಲೇ ಹೇಳಲಾಗಿದೆ. ಶಮಿವೃಕ್ಷದ ಮೇಲೆ ಬಚ್ಚಿಟ್ಟ ಆಯುಧವನ್ನು ಹೊರತೆಗೆದು ವಿರಾಟರಾಜನ ಗೋವುಗಳನ್ನು ಬಿಡಿಸಿಕೊಂಡು ಹೋಗುತ್ತಿದ್ದ ಕೌರವ ಸೈನ್ಯವನ್ನು ಹೊಡೆದೋಡಿಸಿ ಗೋವುಗಳನ್ನು ಬಿಡಿಸಿದ ಅರ್ಜುನ ತನ್ನ ವಿಜಯವನ್ನು ಸಾಧಿಸಿದ್ದು ವಿಜಯದಶಮಿಯಂದೇ, ರಾವಣನನ್ನು ಕೊಂದು ರಾಮ ವಿಜಯ ಸಂಪಾದಿಸಿದ್ದೂ ವಿಜಯದಶಮಿಯಂದೇ.

ಇಂದು ರಾಜರಿಲ್ಲ, ಮಹಾರಾಜರು ಮೊದಲೇ ಇಲ್ಲ, ಆದರೆ ಅರಮನೆಯಿದೆ, ಅರಮನೆಗೆ ಇದ್ದ ಇತಿಹಾಸವಿದೆ. ಮಹಾರಾಜರ ಜಂಬೂಸವಾರಿಯಿಲ್ಲ, ಆದರೆ ಕರ್ನಾಟಕದ ಆರಾಧ್ಯ ದೈವ ಚಾಮುಂಡೇಶ್ವರಿಯ ಜಂಬೂಸವಾರಿಯಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜನರ ಉತ್ಸಾಹವಿದೆ, ಬೆಂಬಲವಿದೆ. ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಈ ನವರಾತ್ರಿ ಇನ್ನು ಮುಂದೆಯೂ ನಡೆದುಕೊಂಡು ಬರಲಿ ಎನ್ನುವುದು ಅಪರಂಜಿಯ ಹಾರೈಕೆ.

*(ಗ್ರಂಥ ಋಣ: ಮೈಸೂರು ದಸರಾ; ಲೇಖಕರು: ವೆಂ.ಮು.ಜೋಶಿ,*
*ವಿಶ್ವಕನ್ನಡ ಸಮ್ಮೇಳನ ಮೈಸೂರು 1983)*

✵

## ಡಿಪ್ಲೊಮಾಟಿಕ್ ಗಂಡ

**ಒಂದು ರಾತ್ರಿ ಹೆಂಡತಿ ಕನ್ನಡಿಯ ಮುಂದೆ.., ಗಂಡ ಪುಸ್ತಕದ ಹಿಂದೆ ಇದ್ದಾರೆ.**

**ಹೆಂಡತಿ: ನೋಡ್ರಿ ನಾನು ಕನ್ನಡೀಲಿ ಮಧ್ಯ ವಯಸ್ಕಳಂತೆ ಕಾಣ್ತಿದೀನಿ. ಮುಖವೆಲ್ಲಾ ಸುಕ್ಕು. ಕೂದಲು ಬೆಳ್ಳಗಾಗಿದೆ. ಭುಜ ಬಿದ್ದಿದೆ. ನನ್ನ ಹುರಿದುಂಬಿಸೋಕ್ಕೆ ಏನಾದ್ರೂ ಹೇಳಿ ಪ್ಲೀಸ್.**

**ಗಂಡ: ನಿನ್ನ ದೃಷ್ಟಿ ತುಂಬಾ ಚೆನ್ನಾಗಿದೆ ಡಿಯರ್.**

# ಚೊಂಬೂ ಸವಾರಿ

**- ಸಿ.ಆರ್. ಸತ್ಯ**

**ದೇ**ವರು ನನಗೆ ಒಂದು ರೀತಿಯ ದಿವ್ಯದೃಷ್ಟಿಯನ್ನು ದಯಪಾಲಿಸಿದ್ದಾನೆ. ಅದರಿಂದಾಗಿ 2015ರಲ್ಲಿ ನಮ್ಮ ಕರ್ನಾಟಕದಲ್ಲಿ ದಸರಾ ಉತ್ಸವ ಹೇಗೆ ನಡೆಯುತ್ತೆ ಅನ್ನೋದನ್ನು ನಾನು ಈಗಲೇ ಗ್ರಹಿಸಿದ್ದೀನಿ. ಈ ಸೌಲಭ್ಯ ನಿಮ್ಮಂತಹವರಿಗೆ ಇಲ್ಲದಿದ್ದಾಗ್ಗಿ, ಇಗೋ ನಿಮಗಾಗಿ ಅದರ ವಿವರ:

''ಗೊಂದಲ'' ಚಾನಲ್ ವೀಕ್ಷಕರಿಗೆಲ್ಲಾ ದಸರಾ ಹಬ್ಬದ ಶುಭಾಶಯಗಳು ಹಾಗೂ, ಇಂದು ವಿಜಯ ದಶಮಿಯಂದು, ಬೆಂಗಳೂರಿನಲ್ಲಿ ಅದ್ದೂರಿಯಾಗಿ ನಡೆಯಲಿರುವ 'ಚೊಂಬೂ' ಸವಾರಿ ಪ್ರತ್ಯಕ್ಷ ವರದಿಗೆ ನಿಮಗೆಲ್ಲರಿಗೂ ಸ್ವಾಗತ. ನಿಮ್ಮ ವರದಿಗಾರ: ಬೆಂಗ್ಳೂರ್ ಸಿದ್ದೇಶ್. ನನ್ನೊಂದಿಗೆ ಕರ್ನಾಟಕದ ಹಿರಿಯ ಚರಿತ್ರಾ ತಜ್ಞೆ ಡಾ|| ಅಲಮೇಲು ಅವರೂ ಇದ್ದಾರೆ. ಅವರಿಂದಲೂ ನಿಮಗೆಲ್ಲಾ ದಸರಾ ಶುಭಾಶಯಗಳು. ನಾವು ಸದ್ಯಕ್ಕೆ ಬೆಂಗಳೂರಿನ ಕೆ.ಆರ್. ಸರ್ಕಲ್‌ನ ಪಕ್ಕದಲ್ಲಿರುವ ವಿಶ್ವೇಶ್ವರಯ್ಯ ಪಾಲಿಟೆಕ್ನಿಕ್ ಬಿಲ್ಡಿಂಗ್‌ನ ಗಡಿಯಾರದ ಪಕ್ಕದಲ್ಲಿ ನಮ್ಮ ಕ್ಯಾಮರಾವನ್ನು ಸ್ಥಾಪಿಸಿದ್ದೀವಿ. ಚೊಂಬೂ ಸವಾರಿಗೆ ಕೇವಲ ಐದು ಹತ್ತು ನಿಮಿಷಗಳೇ ಉಳಿದಿವೆ. ಅದಕ್ಕೆ ಮುಂಚೆ ಡಾ|| ಅಲಮೇಲು ಅವರಿಂದ ನಿಮಗೊಂದು ಹಿನ್ನೆಲೆ:

**2015ರಲ್ಲಿ ದಸರಾ ಉತ್ಸವ ಹೇಗೆ ನಡೆಯುತ್ತದೆ ಎಂಬುದರ ಒಂದು ಎಕ್ಸ್‌ಕ್ಲೂಸಿವ್ ವರದಿ ಇಲ್ಲಿದೆ**

- ಧನ್ಯವಾದಗಳು ಸಿದ್ದೇಶ್. ಮೊದಲನೆಯದಾಗಿ, ಈ ವರ್ಷದಿಂದ ಕರ್ನಾಟಕ ಸರ್ಕಾರ ದಸರಾ ಉತ್ಸವವನ್ನು ಮೈಸೂರಿನಿಂದ ಬೆಂಗಳೂರಿಗೆ ರವಾನಿಸಿರೋದು ಒಂದು ಮುಖ್ಯ ವಿಷಯ. ಕಾರಣ ಇಷ್ಟೆ: ಅನೇಕ ಗಣ್ಯರು ಕೋರ್ಟಿನಲ್ಲಿ ಜಾಮೀನುಗಳಿಗಾಗಿ ಕಾಯ್ತಿದ್ದಾರೆ. ಮತ್ತು 'ತುರ್ತು' ಕಾಯಿಲೆ ಅಂತ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಳಿಗಾಗಿ ಸೇರ್ಕೊಂಡಿದ್ದಾರೆ. ಇವರೆಲ್ಲರಿಗೂ ಮೈಸೂರಿಗೆ ಪ್ರಯಾಣ ಮಾಡೋದು ಕಷ್ಟವಾಗುತ್ತೆ ಅಂತ ವಿಧಾನ ಸೌಧ ಹಾಗೂ ವಿಕಾಸ ಸೌಧಗಳ ಸುತ್ತಮುತ್ತಲೇ ಈ ವರ್ಷ ದಸರಾ ಉತ್ಸವ ನಡೆಸಬೇಕೆಂದು ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆ. ಎರಡನೇ ಕಾರಣ: ಮೈಸೂರು ನಗರ ಬರದಿಂದ ಬಾಡಿಹೋಗಿದೆ. ಕಾವೇರಿ ಪೂರ್ಣವಾಗಿ ಬತ್ತಿ ಹೋಗಿದ್ದು, ಕುಡಿಯೋದಕ್ಕೆ ನೀರೇ ಇಲ್ಲ! ಹಾಗಾಗಿ ಲಕ್ಷಾಂತರ ಪ್ರವಾಸಿಗಳಿಗೆ ಕುಡಿಯುವ ನೀರು ಎಲ್ಲಿಂದ ಒದಗಿಸೋದು? ಅದೇ ನಮ್ಮ ಬೆಂಗಳೂರಿನಲ್ಲಿ ನಮ್ಮ ಸರ್ಕಾರ ಅರ್ಕಾವತಿ ನದಿಗೆ

ಹೊಸ ಜೀವ ಕೊಟ್ಟು, ಅದನ್ನು ತುಂಬಿ ಹರಿಯೋ ಹಾಗೆ ಮಾಡಿದೆ. ನಿಜ ಹೇಳಬೇಕು ಅಂದರೆ ಬೆಂಗಳೂರು ನಗರ ಅರ್ಕಾವತಿ ನದಿಯ ಪ್ರವಾಹದಲ್ಲಿ ಸಿಕ್ಕಿಕೊಳ್ಳುವ ಪ್ರಮೇಯವೂ ಇದೆ! ಹೀಗಾಗಿ ದಸರಾ ವೀಕ್ಷಕರಿಗೆ ಬಾಯಾರಿಕೆ ಅನ್ನೋದೇ ಕಾಣಲಾರದು.

- ನಿಜ, ಅಲಮೇಲಮ್ಮನವರೇ. ಹಾಗೆಯೇ, ಇಲ್ಲಿಯವರೆಗೂ ರೂಢಿಯಲ್ಲಿದ್ದ 'ಜಂಬೂ' ಸವಾರಿ ಅನ್ನೋ ಹೆಸರನ್ನು ಈಗ ಸರ್ಕಾರ 'ಚೊಂಬೂ' ಸವಾರಿ ಅಂತ ಯಾಕೆ ಪುನಃ ನಾಮಕರಣ ಮಾಡಿದೆ ಅಂತ ಹೇಳ್ತೀರಾ?

- ಒಳ್ಳೇ ಪ್ರಶ್ನೆ. ಉತ್ತರ ನಂತರ ತಿಳಿಸ್ತೀನಿ. ವಿಧಾನ ಸೌಧದ ಮುಂದಿನಿಂದ ಸವಾರಿ ಹೊರಟಿದೆ ಅಂತ ಕಾಣುತ್ತೆ. ಕಹಳೆ ಸದ್ದು ಬರ್ತಿದೆ.

- ಹೌದು, ಹೌದು, ವೀಕ್ಷಕರೇ, ಇವತ್ತಿನ ಸವಾರಿ ವಿಧಾನ ಸೌಧದಿಂದ ಹೊರಟು, ಕೆ.ಆರ್. ಸರ್ಕಲ್ ಮೂಲಕವಾಗಿ ಕಾರ್ಪೊರೇಶನ್ ಆಫೀಸ್, ಟೌನ್ ಹಾಲ್ ಬಳಿ ಬಂದು, ಮೈಸೂರು ರಸ್ತೆಗೆ ತಿರುಗಿ, ಅಲ್ಲಿರೋ ಸ್ಯಾಟಲೈಟ್ ಬಸ್‌ಸ್ಟಾಂಡ್‌ನಲ್ಲಿ ಮುಕ್ತಾಯವಾಗುತ್ತೆ. ಹಾಗಾಗಿ ಕರ್ನಾಟಕದ ಇತರೇ ಜಿಲ್ಲೆಗಳಿಂದ ಬಂದಿರುವ ಜಾನಪದ ಗುಂಪಿನವರು, ಸಂಗೀತಗಾರರು ಹಾಗಿಂದ ಹಾಗೇ ಬಸ್ ಹತ್ಕೊಂಡು ಅವರವರ ಊರಿಗೆ ವಾಪಸ್ ಹೋಗಬಹುದು. ಒಂದು ದಿವಸದ ತುಟ್ಟಿ ಭತ್ಯೆ ಸರ್ಕಾರಕ್ಕೆ ಉಳಿಯುತ್ತೆ ಅನ್ನೋದೇ ಮೂಲೋದ್ದೇಶ.

- ಅಂದ ಹಾಗೇ, ನಾನು ಕೇಳಿದ್ದು ಕಹಳೇ ಸದ್ದಲ್ಲ, ಮೆಟ್ರೋ ರೈಲಿನ ಕೂಗು. ವಿಧಾನ ಸೌಧ ಸ್ಟೇಶನ್‌ನಿಂದ ಅದು ಕೂಗು ಹಾಕಿದ ತಕ್ಷಣ ಸವಾರಿ ಹೊರಟಿದೆ. ಮುಂಭಾಗದಲ್ಲಿ ನಾಯಕತ್ವ ವಹಿಸಿಕೊಂಡು, ಸುಮಾರು ಐವತ್ತು ಕನ್ನಡ ವೀರರು ಕೈಗಳಲ್ಲಿ ಕತ್ತಿ, ಲಾಂಗ್, ಮಚ್ಚುಗಳನ್ನು ಹಿಡ್ಕೊಂಡು ಶಿಸ್ತಿನಿಂದ ಮುಂದಕ್ಕೆ ಹೆಜ್ಜೆ ಇಟ್ಟಿದ್ದಾರೆ. ಈ ಪಡೆಯ ಹಿಂದೆ, ಬೆಂಗಳೂರಿನ ದೋಭಿ ಅಸೋಸಿಯೇಶನ್ ಅವರಿಂದ ಇಪ್ಪತ್ತು ಕತ್ತೆಗಳ ಸವಾರಿಯನ್ನು ಕಾಣಬಹುದು.

- ಹೌದು, ಅಲಮೇಲಮ್ಮ. ಇಷ್ಟು ವರ್ಷಗಳು ದೋಭಿಗಳು ದಸರಾ ಉತ್ಸವದಲ್ಲಿ ನಮಗೆ ಪಾಲೇ ಇಲ್ಲ ಅಂತ ವಿಷಾದಿಸುತ್ತಿದ್ದರು. ಈ ವರ್ಷ ಅವರಿಗೆ ಬಟ್ಟೆ ಒಗೆಯಲು ನೀರೂ ಧಾರಾಳವಾಗಿದೆ ಹಾಗೂ ಈ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಸುಯೋಗವೂ ಒದಗಿ ಬಂದಿದೆ. ಬಹಳ ಕಷ್ಟಪಟ್ಟು ಇಪ್ಪತ್ತು ಕತ್ತೆಗಳನ್ನು ಒಟ್ಟಿಗೆ ಸೇರಿದ್ದಾರೆ. ಈ ಕತ್ತೆಗಳೆಲ್ಲವೂ ನೋಡೋದಕ್ಕೆ ಹೆಚ್ಚು ಕಡಿಮೆ ಕುದುರೆಗಳ ಹಾಗೇ ಕಾಣೋದರಿಂದ ಈ ವರ್ಷ ಅಶ್ವಾರೋಹಿತ ಪಡೆ ಈ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಿಲ್ಲ.

- ಸಿದ್ದೇಶ್, ಕತ್ತೆಗಳ ಹಿಂದೆ ಉತ್ತರ ಕರ್ನಾಟಕದಿಂದ ಬಂದಿರುವ 'ಹೊಟ್ಟೇ ಕುಣಿತ'ದ ತಂಡವನ್ನು ನೋಡಿ. ವೀಕ್ಷಕರೇ, ಕಳೆದ ಎರಡು ವರ್ಷಗಳಿಂದ ಬರದಿಂದ ತತ್ತರಿಸಿದ

ತಾಲ್ಲೂಕುಗಳಿಂದ ಬಂದಿರುವ ಈ ತಂಡ, ಈಗ ಮಾಡುತ್ತಿರುವ ನೃತ್ಯದಿಂದ ಸಾಂಕೇತಿಕವಾಗಿ ತಮ್ಮ ಉಪವಾಸದ ಬಗ್ಗೆ ಎಷ್ಟು ಮನಮೋಹಕವಾಗಿ ಅರಿವು ಮಾಡಿಕೊಡ್ತಿದ್ದಾರೆ!

- ವೀಕ್ಷಕರೇ, ಹೊಟ್ಟೇ ಕುಣಿತದ ತಂಡದ ಹಿಂದೆ ಸರ್ಕಾರಿ ಶಾಲಾ ಬಾಲಕಿಯರ ಗೆಜ್ಜೆ ಕುಣಿತವನ್ನೂ ನೀವು ನೋಡುತ್ತಿದ್ದೀರಿ. ಅವರ ಹಿಂದೆ ಕಾಣ್ತಿರೋದು ಹೂವಿನಿಂದ ಅಲಂಕೃತವಾಗಿರುವ 108 ಆಂಬುಲೆನ್ಸ್. ನೆನ್ನೆ ರಾತ್ರಿಯಿಂದಲೇ ಶಾಲಾ ಮಕ್ಕಳನ್ನು ಮೆರವಣಿಗೆಗೆ ನಿಲ್ಲಿಸಿಕೊಂಡಿರುವುದರಿಂದ, ಕೆಲವು ಮಕ್ಕಳು ಜ್ಞಾನ ತಪ್ಪಿ ಬಿದ್ದರೆ, ಒಡನೆಯೇ ಅವನ್ನು ಆಸ್ಪತ್ರೆಗೆ ಸೇರಿಸಲು ಅನುಕೂಲವಾಗುತ್ತೆ. ಓಹೋಹೋ!! ವೀಕ್ಷಕರೇ ಇನ್ನು ಬಣ್ಣ ಬಣ್ಣದ ಟ್ಯಾಬ್ಲೋಗಳನ್ನು ಕಾಣುವ ಸೌಭಾಗ್ಯ ನಿಮ್ಮದಾಗಿದೆ!
- ಮೊದಲನೆಯ ಟ್ಯಾಬ್ಲೋ ಬಿಬಿಎಂಪಿ ಅವರದ್ದು! ಈ ಟ್ಯಾಬ್ಲೋನಲ್ಲಿ ನೀವು ಒಂದು ಮಾದರಿ ಮನೆಯನ್ನು ನೋಡಬಹುದು. ಮನೆಯ ತಾರಸಿಯ ಮೇಲೆ ಕಸದ ರಾಶಿ ಬಿದ್ದಿದೆ. ಕೆಳಗಡೆ ''ನಿಮ್ಮ ಕಸ ನಿಮಗೆ, ನಮ್ಮ ಪಾಡು ನಮಗೆ – ಬಿಬಿಎಂಪಿ'' ಅಂತ ಬರೆದಿದೆ. ಇದು ಅವರ ನೂತನ ಯೋಜನೆ. ಬೆಂಗಳೂರಿನಲ್ಲಿ ಇನ್ನು ಮೇಲಿಂದ ತ್ಯಾಜ್ಯವನ್ನು ರೋಡಿಗೆ ಎಸೆಯೋ ಹಾಗಿಲ್ಲ. ಎಲ್ಲರೂ ಅವರವರ ಮನೆಯ ಕಸವನ್ನು ಅವರವರ ಸೂರಿನ ಮೇಲೆ ಎಸೆಯಬೇಕು. ಇದರಿಂದ ಊರು ಸ್ವಚ್ಛವಾಗಿರುತ್ತೆ ಅಂತ ಮೇಯರ್ ಆದೇಶಿಸಿದ್ದಾರೆ. ಈ ಯೋಜನೆಗೆ ಸರ್ಕಾರದ ಪೂರ್ಣ ಅಂಗೀಕಾರವಿದೆ.
- ನೋಡಿ, ನೋಡಿ, ಅದರ ಹಿಂದೆ ಈಗ ಗೋಚರಿಸುತ್ತಿರುವ ಟ್ಯಾಬ್ಲೋ–ಐಟಿ ಬಿಟಿ ಟ್ಯಾಬ್ಲೋ ಎಷ್ಟು ಚೆನ್ನಾಗಿ ಅವರ ಜೀವನವನ್ನು ಆ ಒಂದು ಟ್ರಕ್ ಮೇಲೆ ರೂಪಿಸಿಕೊಂಡಿದ್ದಾರೆ! ಮಧ್ಯೆ ಇಬ್ಬರು ಹುಡುಗಿಯರು ಹುಡುಗರು ಲ್ಯಾಪ್ ಟಾಪ್ ಕುಟ್ತಿದ್ದಾರೆ. ಹಿಂದೆ 'ಕೋಕೋನಟ್ ಮಾಲ್'ನ ಮಾದರಿ ಬಿಲ್ಡಿಂಗ್. ಒಳಗಡೆ ಮ್ಯಾಕ್‌ಡೊನಾಲ್ಡ್ ಚಿಹ್ನೆ ಎದ್ದು ಕಾಣ್ತಾ ಇದೆ! ಮುಂದೆ ಎಂಟೋ ಹತ್ತೋ ಟೂ ವೀಲರ್ಸ್ ರೋಡ್‌ಗೆ ಅಡ್ಡ ನಿಲ್ಲಿಸಿದ್ದಾರೆ. ತುದಿಯಲ್ಲಿ 'ಚರ್ಚ್ ಸ್ಟ್ರೀಟ್' ಅಂತ ಒಂದು ನಾಮಫಲಕ ಬೇರೆ! ಏನು ಸಿದ್ದೇಶ್? ಅದೇನು ವಾಟರ್ ಟ್ಯಾಂಕರ್ ಏನು?
- ಅಲ್ಲ, ಅಲ್ಲ, ಅದು 'ಬೀರ್'ನ ಟ್ಯಾಂಕರ್! ಪಬ್‌ಗಳ ಮುಂದೆ ನಿಂತು ಹೋಸ್ ಪೈಪ್‌ಗಳ ಮೂಲಕ ಡ್ರಮ್‌ಗಳನ್ನು ತುಂಬಿಸ್ತಿವೆ! ಇಗೋ ಬಂತು, ಬಿಡಿಎ ಟ್ಯಾಬ್ಲೋ! ಎರಡು ಸೇವಾ ಕಿಟಕಿಗಳ ಮೂಲಕ ಬಿಡಿಎ ನಿಂದ ಜನಸೇವೆ ಅಂತ ಘೋಷಿಸ್ತಿದ್ದಾರೆ.
- ಅಂದ್ರೆ, ಅರ್ಥ ಏನು? ಬಿಡಿಎಗೂ ಜನಸೇವೆಗೂ ಸಂಬಂಧ ಇದ್ಯೇನೂ?
- ಒಂದು ಕಿಟಕಿಯಲ್ಲಿ ಒಬ್ಬರು ಒಂದು ಸೈಟ್‌ನ ಖರೀದಿಸ್ತಾರೆ. ಪಕ್ಕದ ಕಿಟಕೀಲಿ ಅದೇ ಸೈಟ್‌ನ ಬಿಡಿಎ ಇನ್ನೊಬ್ರಿಗೆ ಮಾರ್ತಾರಂತೆ! ಹೀಗಾಗಿ ಒಂದೊಂದು ಸೈಟ್‌ಗೆ ಇಬ್ಬರು ಮಾಲೀಕರಾಗಿ ಬೆಂಗಳೂರಿನ ಜನತೆಗೆ ಸೈಟ್‌ಗಳ ವಿತರಣೆಗೆ ಕಾಯುವ ಸಮಯ ಅರ್ಧದಷ್ಟು ಕಮ್ಮಿಯಾಗಿ ಎಲ್ಲರಿಗೂ ಸಂತೋಷ ತಂದಿದೆ. ವೀಕ್ಷಕರೇ, ಹಿಂಭಾಗದಲ್ಲಿ

ದೊಡ್ಡ ದೊಡ್ಡ ಬೆಲೂನ್‌ಗಳನ್ನು ಹಾರಿಸ್ತಿದಾರೆ ಕಾಣುತ್ಯೆ? ಒಂದೊಂದು ಬೆಲೂನಿಗೂ ಒಂದೊಂದು ಮೂಲಂಗಿ, ಆಲೂಗೆಡ್ಡೆ, ಕಿತ್ತಳೆ ಹಣ್ಣು, ಬದನೇಕಾಯಿ ಹೀಗೆ ತರಕಾರಿ ಹಣ್ಣುಗ್ಗಳನ್ನು ಕಟ್ಟಿ ಆಕಾಶಕ್ಕೆ ಬಿಡ್ತಾ ಇದಾರೆ. ಇವು ಈಗೆಲ್ಲಾ ಸಾಮಾನುಗಳ ಬೆಲೆಗಳು ಗಗನಕ್ಕೇ ಏರ್ತಿವೆ ಅನ್ನೋದನ್ನು ಎಷ್ಟು ಚೆನ್ನಾಗಿ ಪ್ರತಿಪಾದಿಸುತ್ತಿವೆ ಎಂದರೆ ಇಬ್ಬದಿಯಲ್ಲಿ ನೆರೆದಿರುವ ಜನರು ಆಕಾಶವೇ ಬಿದ್ದು ಹೋಗುತ್ತೇನೋ ಅನ್ನುವ ಹಾಗೆ ಹರ್ಷೋದ್ಗಾರ ಮಾಡ್ತಿದಾರೆ! ಆನೆ ಬಂತು ಆನೆ! ಯಾವೂರ್ ಆನೆ??

- ಏನು ಸಿದ್ದೇಶ್, ಹಾಡು ಹೇಳೋಕ್ಕೆ ಇಳಿದ್ರಿ? ವಿಷಯ ಏನೂ ಅಂತ ವೀಕ್ಷಕರಿಗೂ ಹೇಳಿ.

- ವೀಕ್ಷಕರೇ, ಇದು ಚೊಂಬೂ ಸವಾರಿಯ ವಿಶಿಷ್ಟ ಭಾಗ. ದೂರದಲ್ಲೊಂದು ಬಿಳಿ ಆನೆ ಮಂದಗಮನನಾಗಿ ನಡದು ಬರ್ತಾ ಇದೆ. ಅದರ ಮೇಲೊಂದು ಅಂಬಾರಿ ಇದೆ. ಅದರ ಮುಂದೆ ಸುಮಾರು ನೂರು ಮಂದಿ, ಕೈಗಳಲ್ಲಿ ಖಾಲಿ ಹಿತ್ತಾಳೆ ಚೊಂಬುಗಳನ್ನು ಹಿಡಿದು ಕೊಂಡು ಮೆಲ್ಲಗೆ ನಡೆಯುತ್ತಿದ್ದಾರೆ. ಅಲಮೇಲಮ್ಮನವರೇ, ನೀವು ಈಗಲಾದರೂ ನಮ್ಮ ವೀಕ್ಷಕರಿಗೆ ಈ ಚೊಂಬಿನ ಬಗ್ಗೆ ತಿಳಿಸಲೇಬೇಕು.

- ಖಂಡಿತ ವೀಕ್ಷಕರೇ. ಹಿತ್ತಾಳೆ ಚೊಂಬನ್ನು ಕೈನಲ್ಲಿ ಹಿಡಿದ್ರೆ, ಮನುಷ್ಯನಿಗೆ ಹೊಟ್ಟೆ ಬಟ್ಟೆ ಏನಿಲ್ಲಾ ಅಂತ ತಿಳಿಸೋ ಒಂದು ಸಂಕೇತವಾಗುತ್ತೆ. ಹಾಗಾಗಿ ಕರ್ನಾಟಕದ ಎಲ್ಲಾ ಜಿಲ್ಲೆಗ್ಗಳಿಂದಲೂ ಪ್ರತಿನಿಧಿಗಳಾಗಿ ಬಂದಿರುವ ಇವರೆಲ್ಲರೂ, ರಾಜ್ಯದಲ್ಲೆಲ್ಲೂ ಹೊಟ್ಟೆಗೆ ಹಿಟ್ಟಿಲ್ಲ ಅಂತ ಪರೋಕ್ಷವಾಗಿ ಹೇಳ್ತಿದಾರೆ. ಆದರೆ ಜುಟ್ಟಿಗೆ ಮಲ್ಲಿಗೆ ಹೂವು ಇಲ್ಲದಿದ್ದರೆ ಆಗುತ್ಯೆ? ಅದಕ್ಕೇ ಈ ಬಿಳೀ ಆನೆ.

- ಬಿಳೀ ಆನೆ?


- ಹೌದು, ಇಂಗ್ಲಿಷ್‌ನಲ್ಲಿ ವೈಟ್ ಎಲಿಫೆಂಟ್ ಅನ್ನೋಲ್ವೇ? ಅದೇ ಇದು. ಅಂದರೆ ಅರ್ಥ: ಕರ್ನಾಟಕದ ಜನತೆ ಹೇಗೇ ಇರಲಿ, ನಮ್ಮ ಆಳುವ ಸರ್ಕಾರ ಒಂದು ವೈಟ್ ಎಲಿಫೆಂಟೇ ಮತ್ತು ಅದರ ನಾಯಕರೂ ವೈಟ್ ಎಲಿಫೆಂಟ್ಸೇ ಅಂತ ಸೂಚಿಸುತ್ತೆ.

- ಹ್ಹಾ! ಪ್ರೇಕ್ಷಕರೇ, ನಿಮಗೆ ಈಗ ಅರ್ಥ ಹೊಳೀತು ಅಲ್ಲವೆ? ''ಅರ್ಜುನ'' ಕರೀ ಆನೆ. ಆದರೂ ಇವತ್ತು ಅದಕ್ಕೆ ಬಿಳಿ ಪೈಂಟ್ ಹೊಡೆದಿದ್ದಾರೆ. ಅಂಬಾರಿಯಲ್ಲಿ ಶುಭ್ರವಾದ ಜುಬ್ಬಾ ಪಂಚೆಯಲ್ಲಿ – ಬಿಳಿ ಬಣ್ಣದಲ್ಲೇ – ಒಬ್ಬ ಗಣ್ಯ ವ್ಯಕ್ತಿ ಸರ್ಕಾರದ ಪ್ರತಿನಿಧಿಯಾಗಿ ಕೂತಿದ್ದಾರೆ. ಇದೊಂದು ಮನೋಲ್ಲಾಸ ದೃಶ್ಯ! ಹಿಂದೆ ಬರುತ್ತಿರುವ ಇನ್ನೊಂದು ಟ್ಯಾಬ್ಲೋನಲ್ಲಿ, ಶಾಸಕರ ಬೊಂಬೆಗಳನ್ನು ನಿಲ್ಲಿಸಿದ್ದಾರೆ. ಅವಕ್ಕೂ ಬಿಳಿ ಬಣ್ಣದ ಜುಬ್ಬ ಪಂಚೆಗಳೇ! ಅವರೆಲ್ಲರ ಮಧ್ಯೆ ಒಂದು ಮಾದರಿ ಭೂಗೋಳ ಮೆಲ್ಲನೆ ತಿರುಗುತ್ತಿದೆ. ಹತ್ತೋ ಹನ್ನೆರಡೋ ವಿಮಾನಗಳೂ ಭೂಮಿಯನ್ನು ಸುತ್ತುತ್ತಾ ಇವೆ? ಯಾಕೆ, ಅಲಮೇಲಮ್ಮನವರೇ?

- ಅವರೆಲ್ಲರೂ ಪ್ರಪಂಚಾದ್ಯಂತ ಪ್ರವಾಸ ಮಾಡಿ, ಹೊರ ದೇಶಗಳ ಪ್ರಗತಿಯನ್ನೆಲ್ಲಾ ವೀಕ್ಷಿಸಿ, ವಿವೇಚಿಸಿ, ಕರ್ನಾಟಕವನ್ನೂ ಒಂದು ಸ್ವಿಟ್ಸರ್‌ಲ್ಯಾಂಡ್ ತರಹಾನೋ ಅಥವ ಒಂದು ಸಿಂಗಪೂರ್ ಹಾಗೋ ಪರಿವರ್ತನೆ ಮಾಡ್ತಾರೆ ಎಂಬ ಸಂದೇಶವನ್ನು ಜನತೆಗೆ ಸಾರ್‍ತಾ ಇದಾರೆ.
- ಹೌದು ವೀಕ್ಷಕರೇ. ಈಗ ಅಕ್ಕ ಪಕ್ಕ ನಿಂತಿರುವ ಪ್ರೇಕ್ಷಕರು ನುಗ್ಗಿ ಬಂದು ಕೈಲಿ ಹಿಡಿದಿರುವ ಖಾಲಿ ಚೊಂಬುಗಳಿಗೆ ಚಿಲ್ಲರೆ ಹಣ ಹಾಕುತ್ತಿದ್ದಾರೆ. ಚೊಂಬುಗಳಿಂದ ಟ್ರಿಣ್ ಟ್ರಿಣ್ ಅಂತ ಸಂಗೀತ ಲಹರಿ ಕೇಳಿ ಬರ್‍ತಿದೆ. ಒಟ್ಟಿನಲ್ಲಿ ಇದೊಂದು ಸೌಹಾರ್ದಮಯ ದೃಶ್ಯ. ಎಷ್ಟೇ ಕಷ್ಟವಾದರೂ ನಗನಗ್ತಾ ಜೀವನ ಸಾಗಿಸ್ತೀವಿ ಅಂತ ಕರ್ನಾಟಕ ಜನತೆ ಪಣ ತೊಟ್ಟಿದೆ ಅಂದರೆ ಉತ್ಪ್ರೇಕ್ಷೆಯಾಗಲಾರದು. ಇದೇ ಮೆರವಣಿಗೆಯ ಕೊನೆಯ ಭಾಗ.
- ಒಟ್ಟಿನಲ್ಲಿ ಈ ಚೊಂಬೂ ಸವಾರಿ ಲಕ್ಷಾಂತರ ಜನರನ್ನು ಆಕರ್ಷಿಸಿದೆ. ಈಗ ಈ ಸಮಾರಂಭಕ್ಕೆ ಪರದೆ ಬೀಳ್ತಿದೆ. ವೀಕ್ಷಕರೇ, ಮೈಸೂರಿನಲ್ಲಿ ಇರುತ್ತಿದ್ದ ಹಾಗೆ ಇಂದು ಜಂಬೂ ಮಂಟಪದ ಕಾರ್ಯಕ್ರಮಗಳ ತರಹ ಬೇರಾವುದನ್ನೂ ಹಮ್ಮಿಕೊಂಡಿಲ್ಲ. ಪಂಜುಗಳಿಗೆ ಸೀಮೇ ಎಣ್ಣೆ ಬರ, ಮೈದಾನಗಳಿಗೆ ವಿದ್ಯುತ್ ಕಡಿತಗಳಿರೋದರಿಂದ. ಒಂದು ನಿಮಿಷ ಇರಿ. ಹಿಂಭಾಗದಲ್ಲಿ ಒಂದು ನಾಯಿಗಳ ಪಡೆ ಕಾಣ್ತಾ ಇದೆಯಲ್ಲಾ..?
- ಅವು ಮೆರವಣಿಗೆಗೆ ಸೇರಿದ್ದಲ್ಲ ಬಿಡಿ. ಬೀದಿ ನಾಯಿಗಳು, ವೀಕ್ಷಕರೇ 'ಗೊಂದಲ' ಚಾನಲ್ ಪರವಾಗಿ, ನಮ್ಮಿಬ್ಬರ ಪರವಾಗಿ, ನಿಮಗೆ ನಾವು ನಮಸ್ಕಾರ ಹಾಗೂ ವಿದಾಯ ಹೇಳ್ತಿದೀವಿ. ಬೇಕೆಂದರೆ, ರಾತ್ರಿ ಹತ್ತು ಘಂಟೆಗೆ ಈ ಕಾರ್ಯಕ್ರಮವನ್ನು ನೀವು ಪುನಃ ನೋಡಬಹುದು. 'ಗೊಂದಲ' ಇದನ್ನ ಮರುಪ್ರಸಾರ ಮಾಡಲಿದೆ. ಶುಭ ರಾತ್ರಿ!

✵

*ಕೊರವಂಜಿಯಿಂದ*




ಇವನಿಗೆ ಹೇಗಪ್ಪಾ ಹೇಳೋದು– ಮಂತ್ರಿಗಳು ನಮ್ಮ ಹಳ್ಳಿಗೆ ಬರೋ ಹೊತ್ತಿಗೆ ಹನ್ನೆರಡಾಗಿರುತ್ತೆ ರಾತ್ರಿ ಅಂತ...

# ಅಂತಿಂಥ ಗೊಂಬೆ ಇವಲ್ಲ...

**- ಎನ್. ರಾಮನಾಥ್**

**ಆ**ಹ್! ಬಂದ್ರಾ, ಬನ್ನಿ. ಒಬ್ಬರು ಇನ್ನೊಬ್ಬರ ಮನೆಗೆ ಹೋಗಿ ಗೊಂಬೆ ನೋಡೋ ಸಂಸ್ಕೃತೀನೇ ತಪ್ಹೋಯ್ತುಲ್ಲಾಂತ ಪರಿತಪಿಸ್ತಾ ಕೂತಿದ್ದೆ. ಬನ್ನಿ, ನನಗೆ ಗೊಂಬೆ ಕೂಡ್ಸೋದಷ್ಟೇ ಅಲ್ದೆ, ಅದರ ವಿವರಣೆ ಕೊಡೋದು ಬಹಳ ಇಷ್ಟದ ಕೆಲಸ. ಬನ್ನಿ, ಹೀಗೆ ಬನ್ನಿ.

ನೋಡಿ, ಇದೊಂದು ಗೊಂಬೆ ಮಾತ್ರ ಇಟ್ಟಾಂಗ್ಲಿಂದ ತ್ರಾಸ ಕೊಡ್ತಾ ಇದೆ. ನಾನು ಬೇರೆ ಕಡೆ ಇಡೋದು, ಅದು ಛಟ್ಟಂತ ಬಂದು ಪಟ್ಟದ ಗೊಂಬೆ ಜಾಗದಲ್ಲೇ ಕೂರೋದು ಆಗ್ತಾನೇ ಇದೆ. ''ನೋಡು, ನೀನು ಮುಕ್ಕಾಗಿದ್ದೀಯ, ನಿನ್ನ ರೆಪ್ಯುಟೇಷನ್ನೂ ಮಣ್ಣುಮುಕ್ಕಾಗಿದೆ. ನೀನು ಈಗ ಪಟ್ಟದ ಗೊಂಬೆ ಅಲ್ಲ'' ಅಂತ ಎಷ್ಟು ತಿಳಿಹೇಳಿದ್ರೂ ಪಟ್ಟದಗೊಂಬೆ ಜಾಗದಲ್ಲೇ ಹೋಗಕ್ಕೆ ಹಠ ಮಾಡ್ತಾ ಇದೆ, ಗೊತ್ತಾಯ್ತಾ ಇದು ಯಾವ ಗೊಂಬೆ ಅಂತ? ಇಲ್ವೇ? ಇದೇ ಯಡ್ಡಿ ಗೊಂಬೆ!

> ದಸರಾಕ್ಕೆಂದು ಈ ಬಾರಿ ಥರಥರಾವರಿ ಗೊಂಬೆಗಳನ್ನು ಕೂಡಿಸಲಾಗಿದೆ. ಒಂದು ಸುತ್ತು ಹಾಕಿ...

ಕೊಂಚ ಅತ್ತ ಬೆಳೆಸಿ ನಿಮ್ಮ ಪಾದಾನ. ಅಲ್ಲಿ, ಕೋಲ್ಗೇಟ್ ಕಂಪ್ನೀಗೆ ಅಡ್ವರ್ಟೈಸ್‌ಮೆಂಟ್ ಕೊಡೋ ತರಹ ಎರಡು ಗೊಂಬೆಗಳು ಕೂತಿವೆ ನೋಡಿ. ಇವುಗಳು ತುಟಿ ಹೊಲಿದ್ರೂ ನಗೋದನ್ನ ನಿಲ್ಸಲ್ಲ. ಆ ಹೆಣ್ಣುಗೊಂಬೆ ಬಹಳ ಲಕ್ಷಣವಾಗಿದೆ. ಚೆನ್ನಾಗಿ ತನಗೆ ವಹಿಸಿದ್ದನ್ನೂ ನಿಭಾಯ್ಸತ್ತೆ. ನಗ್ತಾನಗ್ತಾನೇ ತನಗೆ ಏನೇನು ಬೇಕೋ ಅದನ್ನೆಲ್ಲಾ ಪಡೆಯತ್ತೆ, ಈ ಗಂಡು ಗೊಂಬೆ ಸುಮ್ಮನೆ ನಗತ್ತೆ, ಆದ್ರೆ ಆ ಎಡ್ಡಿ ಗೊಂಬೆ ಕಂಡ್ರೆ ಒಳಗೊಳಗೇ ನಡುಗತ್ತೆ. ಪಾಪ! ಇದು ಪಟ್ಟದಗೊಂಬೇನೇ ಆಗ್ಬೇಕಿತ್ತು, ಆದ್ರೆ ಎಡ್ಡಿ ಕೈಲಿ ಸಿಕ್ಕಿ ಇದ್ದ ಸೀಟೂ ಕಳ್ಕೊಳ್ತು. ಆ ಹೆಣ್ಣುಗೊಂಬೆ ಹೆಸರು ಶೋಭಾ ಅಂತ; ಗಂಡು ಸದಾನಂದ ಅಂತ.

ಇಲ್ಲಿ, ಯಾರ ಕೈಗೂ ಸಿಗದ ಹಾಗೆ ಓಡ್ತಾ ಇದೆ ನೋಡಿ, ಇದರದೊಂದು ಕಥೆ. ದಿನಾ ಟಿವಿಗಳಲ್ಲಿ ಕಾಣಿಸಿಕೊಂಡು ಭಗವಂತ, ಧ್ಯಾನ ಅಂತ ಏನೇನೋ ತಮಾಷೆ ಮಾತುಗಳನ್ನ ಹೇಳ್ತಾ ಇದ್ದ ಈ ಗೊಂಬೆ ಒಂದು ಹೆಣ್ಣುಗೊಂಬೆ ಜೊತೆ ಆಡಬಾರದ ಆಟ ಆಡ್ತೂಂತ ಸೂತ್ರಧಾರರು ಹಗ್ಗ ಕಿತ್ತಿದ್ರು. ಈ ಗೊಂಬೆಗೆ ದೊಡ್ಡ ಜಾಗಾನೇ ಇತ್ತು. ಒಳ್ಳೆ ಜಾಗದಲ್ಲೇ ಬಿಡದಿ ಬಿಟ್ಟಿತ್ತು. ಬಹಳ ಬೊಗಳೆ ಬಿಡೋ ಗೊಂಬೆ ಇದು. ಈಗ ಯಾರ್‍ಯಾರ್‍ಗೋ ಹೆದರಿ, ಎಲ್ಲೆಲ್ಲೋ ಓಡ್ತಿದೆ. ಇದೇ ನಿತ್ಯಾನಂದ ಗೊಂಬೆ.

ಆ ಕಡೆ ಒಂದು ಮುದುಕಪ್ಪನ ಗೊಂಬೆ ಕಾಣಿಸ್ತಾ ಇದೆಯಾ? ಅದೇ... ತಲೇಮೇಲೆ ಟೋಪಿ ಇಟ್ಕೊಂಡಿದೆಯಲ್ಲಾ... ಇಲ್ಲ ಇಲ್ಲ, ನೀವು ಅನ್ಕೊಂಡಹಾಗೆ ಇದು ಯಾರ್‍ಗೂ ಟೋಪಿ

ಹಾಕಿಲ್ಲ, ಕೀ ಕೊಟ್ರೆ ಸಾಕು, ಟೋಪಿ ಹಾಕೋವ್ರಿಗೆ ಧಿಕ್ಕಾರ ಅಂತ ಸೊಗಸಾಗಿ ಕೂಗತ್ತೆ. ಒಂದ್ಕಾಲದಲ್ಲಿ ಇದು ಆದಷ್ಟು ಫೇಮಸ್ಸು ಇನ್ಯಾವ ಗೊಂಬೇನೂ ಆಗಿರ್ಲಿಲ್ಲ. ಯಾವ್ದೋ ಪಾಪ್ಯುಲಾರಿಟಿ ಸ್ವಲ್ಪ ಕಳ್ಕೊಳ್ತು. ಟೋಪಿ ಹಾಕೋವ್ರಿಗೆ ಟೋಪಿ ಹಾಕೋದನ್ನ ನಿಲ್ಸಕ್ಕೆ ಜಾಸ್ತಿ ಟೈಂ ಕೊಟ್ಟೂ ಕೊಟ್ಟೂ ಇದರ ಟೈಮೇ ಹಾಳಾಯ್ತು. ಇದೇ ಅಣ್ಣಾ ಹಝಾರೆ ಗೊಂಬೆ.

ಅಲ್ಲಿ ನೋಡಿ, ಹಳೇ ಕಾಲದ ಋಷಿಗಳ ತರಹ ಗಡ್ಡ ಬಿಟ್ಕೊಂಡು, ಹೆಂಗಸರ ತರಹ ಚೂಡಿದಾರ್ ಹಾಕ್ಕೊಂಡಿದೆಯಲ್ಲಾ, ಅದು ಮಾತೆತ್ತಿದ್ರೆ ''ಬ್ಲಾಕ್ ಮನಿ ಹೊರಗೆ ತನ್ನಿ'' ಅಂತ ಕಿರುಚತ್ತೆ, ಕಿರುಚಿದ ರಭಸಕ್ಕೆ ಸುಸ್ತಾಗಿ ಒಂದು ತಿಂಗಳು ಸುಮ್ನೆ ಕೂಡತ್ತೆ. ಆಚ್ಚುಯಲಿ ಇದೂ ಕೂಡ ತನ್ನ ಹೊಟ್ಟೇಲಿ ಬ್ಲಾಕ್ ಮನಿ ಇಟ್ಕೊಂಡಿದೆ ಅಂತ ಕೈಕೈ ಹಿಸುಕಿಕೊಳ್ಳೋ ಗುಂಪಿನ ಗೊಂಬೆಗಳು ಹೇಳ್ತಿವೆ. ಈ ಗೊಂಬೆಗೆ ರಾಮ್‌ದೇವ್ ಗೊಂಬೆ ಅಂತ ಕರೀತಾರೆ.

ಮೇಲ್ಗಡೆ ಸಾಲ್ನಲ್ಲಿ ಈ ಎಲ್ಲಾ ಗೊಂಬೆಗಳ ಸೂತ್ರಾನ ಹಿಡ್ಕೊಂಡಿದೆಯಲ್ಲಾ, ಅದು ಬಹಳ ವರ್ಷಗಳಿಂದ ನಮ್ಮಲ್ಲಿ ಇರೋ ಗೊಂಬೆ. ನಮ್ಮವರು ಒಬ್ಬರು ವಿದೇಶಕ್ಕೆ ಹೋಗಿದ್ದಾಗ ಹಿಡ್ಕೊಂಡು ಬಂದ ಫಾರಿನ್ ಗೊಂಬೆ ಅದು. ಮೊದಲು ತಾನಾಯ್ತು, ತನ್ನ ಪಾಡಾಯ್ತು ಅಂತಿತ್ತು. ಈಗ ಅದೇ ಪವರ್‌ಫುಲ್. ಆ ಗೊಂಬೆ ಗುರುತು ಸಿಕ್ಕಿರ್ಬೇಕಲ್ವಾ? ಕರೆಕ್ಟ್, ಅದೇ ಸೋನಿಯಾ ಗೊಂಬೆ!

ಈ ಪಟ್ಟದಗೊಂಬೆ ನೋಡಿ; ನೋಡಿ ಅಂದ್ರೆ ನೋಡೋದಷ್ಟೇ ಅಲ್ಲ, ಕಿವಿಯಾರೆ ಕೇಳಿಸಿಕೊಳ್ಳಿ. ''ಅಸೆಂಬ್ಲೀಲಾದರು ಹಾಕು, ಮನೆಯಲ್ಲಾದರು ಹಾಕು ಶರಣೆಂಬೆ, ಅಸೆಂಬ್ಲೀಲಿ ಕೂತ್ರೂನೂ, ಮನೆಯಲ್ಲೆ ಇದ್ರೂನೂ ನೀನೇ ಸಿಎಂ ಎನಗೆ ಶರಣೆಂಬೆ'' ಅಂತಾಯಿದೆ ಕೇಳಿಸ್ತಾ? ಇಲ್ಲಿರೋ ಎಲ್ಲಾ ಗೊಂಬೆಗಳೂ ಕೀ ಕೊಟ್ರೆ ಒಂದೊಂದು ತರಹದ ಆಟ ಆಡತ್ವೆ. ಆದರೆ ಇದು ಯಾವ ಆಟಾನೂ ಆಡಲ್ಲ, ಸುಮ್ಮನೆ ಒಂದ್ಕಡೆ ಕೂತಿರತ್ತೆ, ಎಡ್ಡಿಗೊಂಬೆ ಹತ್ರ ಬಂದಾಗ ಕೀ ಕೊಡ್ದೇಯಿದ್ರೂ ಎದ್ದು ನಿಲ್ಲತ್ತೆ. ಇದರ ಹೆಸರು ಶೆಟ್ಟರ್ ಗೊಂಬೆ.

ಆ ಸೋನಿಯಾ ಗೊಂಬೆ ಕಾಲ್ಹತ್ರ ಒಂದು ಗಡ್ಡ ಬಿಟ್ಕೊಂಡಿರೋ ಗೊಂಬೆ ಇದೆಯಲ್ಲಾ, ಅದು ಕೋಲ್ಗೇಟ್ ಕಂಪನೀದು. ಹಲ್ಲುಜ್ಜೋ ಪೇಸ್ಟಿನದಲ್ಲಾ, ಇಂಗ್ಲಿಷ್‌ನಲ್ಲಿ ಕೋಲ್ ಅಂತಾರಲ್ಲಾ, ಕಲ್ಲಿದ್ದಲು, ಆ ಕಂಪನೀ ಮಾಡಲ್ ಆದ್ರಿಂದ ಈ ಗೊಂಬೆಗೆ ಕೋಲ್ಗೇಟ್ ಗೊಂಬೆ ಅಂತಾನೂ ಅಂತಾರೆ. ಈ ಗೊಂಬೆ ನಿಯತ್ತೇ ನಿಯತ್ತು. ಸೋನಿಯಾ ಗೊಂಬೆ ನಿಲ್ಲು ಅಂದ್ರೆ ನಿಲ್ಲತ್ತೆ, ಕೂಡು ಅಂದ್ರೆ ಕೂಡತ್ತೆ. ಇನ್ನೊಂದೆರಡು ತಿಂಗಳಿಗೆ ಮುಕ್ಕಾಗಿಹೋಗತ್ತೆ ಪಾಪ. ಮುಂದಿನ ದಸರಾಗೆ ಪಟ್ಟದಗೊಂಬೆಯಾಗಿ ಇರಲ್ಲಾನ್ಸತ್ತೆ. ಇದು ಯಾವ ಗೊಂಬೆ ಗೊತ್ತಾಯ್ತಾ? ಸರಿಯಾಗಿ ಹೇಳಿದ್ರಿ, ಇದೇ ಮನಮೋಹನ ಗೊಂಬೆ.

ಸ್ವಲ್ಪ ಈ ಪಕ್ಕ ಬನ್ನಿ, ಇಲ್ಲಿ ಕೈಲಿ ಪುಸ್ತಕ ಹಿಡ್ಕೊಂಡು ಎಡಿಬಿಹೆಚ್ ಝೆಡ್‌ಓಎಲ್‌ಜಿ ಅಂತ ಅರ್ಥಪರ್ಥ ಇಲ್ಲದೆ ಬರೀತಾ ಇದೆಯಲ್ಲಾ, ಇದರ ಯೋಗವೇ ಯೋಗ. ಈ ಗೊಂಬೆ ಬರೆಯೋದೂ, ಹೇಳೋದೂ ಯಾವುದಕ್ಕೂ ಅರ್ಥ ಇರಲ್ಲ, ಆದರೂ ಜನಗಳಿಗೆ ಇದು ಅಚ್ಚುಮೆಚ್ಚು, ಕರಡಿಗೆ ಜಾಮೂನು ತಿನ್ಸೋದು, ಗೊರಿಲ್ಲಾಗೆ ಐಸ್‌ಕ್ರೀಮ್ ತಿನ್ಸೋದೂಂತ

ಏನೇನೋ ಬರೀತಾ ಇರತ್ತೆ. ಫಿಲ್ಮ್ ಲ್ಯಾಂಡ್ ಅಂದ್ರೆ ಪ್ರಾಣ ಅಂತೆ ಈ ಗೊಂಬೆಗೆ. ಇದಕ್ಕೆ ಯೋಗದ ರಾಜಣ್ಣ ಗೊಂಬೆ ಅಂತ ಕರೀತಾರೆ.

ಎಲ್ಲದರ ಮಧ್ಯದಲ್ಲಿ ಎದ್ದುಕಾಣ್ತಾ ಇದೆಯಲ್ಲಾ, ಅದು ಜೈಲುಗೊಂಬೆ ಅಂತ. ಒಂಥರಾ ಅವಳಿಜವಳಿ ಗೊಂಬೆಗಳು ಅವು. ಭೂಮಿಯ ಕೆಳಭಾಗದಲ್ಲಿ ಸುರಂಗದಲ್ಲಿ ಸಿಕ್ಕ ಗೊಂಬೆಗಳಂತೆ ಅವು. ಬಹಳ ಗಟ್ಟಿ ಗೊಂಬೆಗಳು ಅವು. ಬೇರೆ ಸೆಲ್ ಹಾಕಿದ್ರೆ ಓಡಲ್ಲ, ಅವಕ್ಕೆ ಮ್ಯಾಂಗನೀಸ್ ಸೆಲ್ಲೇ ಆಗ್ಬೇಕು. ಒಂದು ಕಾಲದಲ್ಲಿ ಇಡೀ ಗೊಂಬೆಗಳ ಸಾಮ್ರಾಜ್ಯಾನ ತಮ್ಮ ಮುಷ್ಠೀಲಿ ಇಟ್ಕೊಂಡಿದ್ವು. ''ಯಡ್ಡಿಗೊಂಬೆ ಜೊತ್ಲೋ ಪಡಿ ಪಾಡ್ಯೆಪೋತ್ಮಿ ಮೇಮು'' ಅಂತ ತೆಲುಗಲ್ಲಿ ಜೋಡಿರಾಗಾನ ಸೊಗಸಾಗಿ ನುಡಿಸತ್ವೆ ಇವು. ಇವಕ್ಕೆ ರೆಡ್ಡಿಗೊಂಬೆ ಅಂತಾರೆ.

ಮೇಲ್ಗಡೆಯಿಂದ ಸ್ವಲ್ಪ ಕೆಳಕ್ಕೆ ಒಂದು ಫ್ಯಾಮಿಲಿ ಸೆಟ್ ತರಹದ ಗೊಂಬೆ ಕಾಣ್ತಾ ಇದೆಯಾ, ಗಮನವಿಟ್ಟು ನೋಡಿ, ಆ ಸೆಟ್‌ನಲ್ಲಿರೋ ಹಿರಿಯ ಗೊಂಬೆ ಬೇರೆಲ್ಲಾ ಗೊಂಬೆಗಳೂ ಅಲ್ಲಾಡದ ಹಾಗೆ ಸೂತ್ರ ಹಿಡ್ಕೊಂಡಿದೆ. ನಾಲ್ಕು ಸೂತ್ರಗಳನ್ನ ಕೈಲಿಟ್ಕೊಂಡೇ ತೂಕಡಿಸ್ತಾ ಇದೆ. ಸೂತ್ರದ ಒಂದು ತುದೀಲಿರೋ ಗೊಂಬೆ ''ಇವತ್ತು, ಈ ಸಂದರ್ಭದಲ್ಲಿ ಇದೇನಾಗಿದೇಂದ್ರೆ... ನಾವು ಸರ್ಕಾರ ಉರುಳ್ಸೋವರ್ಗೂ ಸುಮ್ನೆ ಬಿಡಲ್ಲ'' ಅಂತಿದೆ. ಅದರ ಪಕ್ಕದಲ್ಲೇ ಇರೋ ಸೂತ್ರದ ತುದೀಲಿ ಕೈಲಿ ಒಂದು ಟಿವಿ ಇಟ್ಕೊಂಡಿರೋ ಹೆಣ್ಣುಗೊಂಬೆ ಇದೆ. ಆ ಹೆಣ್ಣುಗೊಂಬೆ ಪಕ್ಕದಲ್ಲೇ ಇನ್ನೊಂದು ಹೆಣ್ಣುಗೊಂಬೆ ''ಗಂಗೆ ನಾನು, ಗೌರಿ ನೀನು, ಇಬ್ಬರು ಹೆಂಡರು ಶಿವನೀಗೆ'' ಅಂತ ಹಾಡ್ತಾ ಇದೆ. ಇನ್ನೊಂದು ತುದೀಲಿರೋ ಗೊಂಬೆ ಕೈಲಿ ಹಳೇ ಹಾಲಿನ ಬಾಟ್ಲು ಇಟ್ಕೊಂಡಿದೆ. ಮಧ್ಯದಲ್ಲಿರೋದೇ ದೊಡ್ಡಗೌಡ ಗೊಂಬೆ. ಸುತ್ತ ಇರೋದು ಆ ಗೊಂಬೆಯ ಪರಿವಾರ. ಇದನ್ನು ಜೆಡಿಎಸ್ ಗೊಂಬೆ ಅಂತ ಕರೀತಾರೆ. ಅದರ ಸುತ್ತಾ ಡ್ಯಾನ್ಸ್ ಮಾಡ್ತಾ ಇದೆಯಲ್ಲಾ, ಬೆನ್ನಿಗೆ ಬಟ್ಟೆ ಇಲ್ಲದೇ ಇರೋ ಸುಂದರವಾದ ಗೊಂಬೆ, ಅದನ್ನ ಪೂಜಾ ಗೊಂಬೆ ಅಂತ ಕರೀತಾರೆ.

ಇಲ್ಲಿ, ಈ ಮೂಲೇಲಿ ಏರೋಪ್ಲೇನ್‌ನಿಂದ ಬಿದ್ದು ಬೆನ್ನು ಮುರ್ಕೊಂಡಿರೋ ಗೊಂಬೆ ಇದೆಯಲ್ಲಾ, ಅದೇ ಮಲ್ಯಾ ಗೊಂಬೆ. ಆ ಕಡೆ, ಕೀ ಕೊಟ್ರೂ ಸ್ವರ ಸರಿಯಾಗಿ ಹೊರಡದೇ ಇರೋ ಗೊಂಬೇನೇ ಸಿದ್ಧರಾಮಯ್ಯ ಗೊಂಬೆ, ಆನೇಗೇಂತ ತೋಡಿದ ಹಳ್ಳದಲ್ಲಿ ಬಿದ್ದು ಮೈಕೈ ಗಾಯ ಮಾಡ್ಕೊಂಡಿರೋ ಗೊಂಬೇನೇ ಮಾಯಾವತಿ ಗೊಂಬೆ, ದಪ್ಪಗೆ, ಬೆಳ್ಳಗಿದ್ದು ''ದಾಹ-ದಾಹ, ನೀರು-ನೀರು'' ಅಂತ ಕಿರಿಚ್ತಾಯಿರೋದು ಜಯಲಲಿತಾ ಗೊಂಬೆ. ಏನು, ಏನು ನೋಡ್ತಾಯಿದ್ದೀರಿ? ಓ! ಏರೋಪ್ಲೇನ್ ಮೇಲೆ ಕೂತಿರೋ ಗೊಂಬೆ ಯಾವುದು ಅಂತಾನಾ? ವಿದೇಶದಲ್ಲೇ ಜಾಸ್ತಿ ಕಾಲ ಕಳೆದ ಪ್ರತಿಭಾ ಗೊಂಬೆ ಅದು.

ಬನ್ನಿ, ಆಚೆಕಡೆ ಎರಡು ಗೊಂಬೆ ತೂಗ್ಹಾಕಿದ್ದೀನಿ. ಅಲ್ಲಿ ವರಾಂಡದಲ್ಲಿ ತೂಗ್ಹಾಕಿದ್ದೀವಲ್ಲ, ಅದರಲ್ಲಿ ಒಂದು ಅಫ್ಜಲ್ ಗುರು ಗೊಂಬೆ, ಇನ್ನೊಂದು ಕಸಬ್ ಗೊಂಬೆ. ಯಾಕೆ ನೇತ್ಹಾಕಿದ್ದು ಅಂತೀರಾ? ಅವರನ್ನಂತೂ ನೇತ್ಹಾಕಕ್ಕಾಗಲ್ಲ, ಗೊಂಬೇನಾದ್ರೂ ನೇತ್ಹಾಕೋಣಾಂತ. ಸಂತೋಷ್ವೇ? ನನಗೂ ಅಷ್ಟೆ. ಏನ್ಮಾಡೋದು...

ಮುಂದಿನ ಸಾರೀನೂ ಬನ್ನಿ. ಹೊಸ ಗೊಂಬೆ ತರ್ಸಿರ್ತೀನಿ. ಬಂದಿದ್ದಕ್ಕೆ ಥ್ಯಾಂಕ್ಸ್.

✵

# ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

# ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2012

**ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.**

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 3 ರಿಂದ 4 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ.750/-) ಹಾಗೂ ಮೂರನೇ (ರೂ.500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ. ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2012.

# ಬನ್ನಿ ಬಂಗಾರವಾಗುವ ಸಮಯ...

– ಭೂಮಿತಾಯಿ

**ಚೌ**ತಿಯ ಹನ್ನೊಂದು ದಿನಗಳು ಮುಗದ ಕೂಡಲೆ, ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದೊಳಗ ಬಟ್ಟಿ ಒಗಿಯೂ ಸಂಭ್ರಮ ಸುರು ಆಗ್ತದ. ಚಳಿಗಾಲದ ಈ ಎಳೀ ಬಿಸಿಲಿನೊಳಗ ಎಲ್ಲಾ ಬಟ್ಟಿ ಒಗದ ಹಾಕಿದ್ರ ಮನ್ಯಾಗ ತಿಗಣಿ, ಜಿಗಣಿ, ಜೊಂಡಗ್ಯಾ ಆಗೂದಿಲ್ಲ ಅನ್ನೂದು ಒಂದು ಕಾರಣ. ಆದ್ರ, ದೇವಿ ಕುಂದ್ರೂ ಮನಿಯೊಳಗ ಮಡಿ ಮಾಡಲೇಬೇಕು ಅನ್ನೂದು ಆಚಾರ.

ಇಲ್ಲಿ ಘಟ್ಟ ಸ್ಥಾಪನೆ ಮತ್ತು ದೀಪಾ ಹಾಕೂದು ಎರಡಕ್ಕೂ ಹೆಚ್ಚಿನ ಮಹತ್ವ ಅದ. ನವರಾತ್ರಿ ಇಲ್ಲಿ ಶಕ್ತಿ ದೇವತೆಯ ಉಪಾಸನೆ ಜೊತೆಗೆ ಭೂಮಿ ದೇವಿಯ ಉಪಾಸನೆಯೂ ಹೌದು. ದೇವರ ಜಗಲಿ ಮ್ಯಾಲೆ, ಹೊಲದ ಮಣ್ಣು ತಂದು ಹಾಕಿ, ಮೂರು ದಿನ, ಐದು ದಿನ, ಏಳು ವಾರ, 9 ದಿನಗಳ ಘಟ್ಟ ಸ್ಥಾಪನೆ ಮಾಡ್ತಾರ. ಘಟ್ಟ ಸ್ಥಾಪನೆ ಅಂದ್ರ, ಅದೆಷ್ಟು ದಿನದ ಪೂಜೆಯೋ ಅಷ್ಟು ಥರದ ಕಾಳುಗಳನ್ನು ಹಾಕಬೇಕು. ಅವು ಮೊಳಕಿಯೊಡದು, ಬೆಳಿಯೂ ಎತ್ತರದ ಮ್ಯಾಲೆ ಆ ವರ್ಷದ ಬೆಳಿ ಲೆಕ್ಕಾಚಾರ ಹಾಕೂದು ವಾಡಿಕೆ. ಅಕ್ಕಿ, ಗೋದಿ, ಜೋಳ, ನವಣಿ, ಕಾಳು ಎಲ್ಲವೂ ದೇವರ ಜಗಲಿ ಮ್ಯಾಲೆ ನಳನಳಸ್ತಾವ. ಆ ಹಸಿರು ಹೊದಿಕಿ ನೋಡೂದ ಒಂದು ಚಂದ.

> ಬಂಗಾರನೇ ಬದುಕಾಗಿರುವ ಈ ದಿನದೊಳಗ, 'ಬನ್ನಿ' ಅಂತ ಬಾಯ್ತುಂಬ ಕರಿಯೂದ ಬಂಗಾರ ಆಗೇದ.

ಒಂಬತ್ತು ದಿನ ಘಟ್ಟ ಸ್ಥಾಪನೆ ಮಾಡೋರ ಮನ್ಯಾಗ ದಿನಾ ಎದ್ದು ಕೂಡಲೇ ಹಸಿರು ಮುಕ್ಕಳಸಿ ಹೊರಬಂತೇನು ಅಂತ ನೋಡೂದ ಒಂದು ಚಂದ. ಘಟ್ಟ ಸ್ಥಾಪನೆಯ ಜೊತಿಜೊತಿಗೆ ದೀಪಾ ಹಾಕೂ ಸಂಪ್ರದಾಯನೂ ಅದ. ಒಮ್ಮೆ ದೀಪ ಮುಡಿಸಿದ್ರ ಅದು ಶಾಂತ ಆಗಾಕ ಬಿಡೂಹಂಗಿಲ್ಲ. ಅದಕ್ಕೇ ಜಂತಿಯ ನಾರಿನಷ್ಟು ದಪ್ಪದ ಬತ್ತಿ ಮಾಡಿ, ಬೊಗಸೆಯಗಲದ ಹಣತಿಯೊಳಗ ಎಣ್ಣಿ ಹಾಕಿ ದೀಪ ಹಚ್ತಾರ. ಈ ದೀಪ ಹಾಕೂದು, ಘಟ್ಟಾ ಕೂಡಸೂದು ಇವೆರಡರ ಆಕರ್ಷಣೆ ಅಂದ್ರ ಚೌತಿಗೆ ಹಪ್ಪಳ, ಕರದೊಡಿ, ಖಾರದೊಡಿ, ಗಾರಗಿ ಎಲ್ಲಾ ಮಾಡಿ, ದಾರಕ್ಕ ಕಟ್ಟಿ ಹಂದರಾ ಮಾಡ್ತಾರ. ಆ ಹಂದರದ ಎತ್ತರಕ್ಕ ಘಟ್ಟದೊಳಗಿನ ಬೆಳಿ ಬಂದ್ರ, ಭೂಮಿ, ಬಂಗಾರ ಬೆಳೀತದ ಅಂತನ ಅರ್ಥ.

ನಮ್ಮನ್ಯಾಗ ಇವ್ಯಾವೂ ಆಚರಣೆಗಳಿರಲಿಲ್ಲ, ಆದ್ರ ಐನಾರು ಅಂತ ಆಚರಸೋರ ಮನೀಗೆ ಊಟಕ್ಕ ಕರೀತಿದ್ರು. ಮಧ್ಯಾಹ್ನದ ಹೊತ್ತಿಗೆ ಹೋಗಿ, ಮಾಡಿದ್ದೆಲ್ಲ ಗಡದ್ದಗೆ ಉಂಡು, ಒಂದು ರೂಪಾಯಿ ದಕ್ಷಿಣ ಇಸ್ಕೊಂಡು ಬರೂದೆ ನಮ್ಮ ಕೆಲಸ ಆಗಿತ್ತು. ಊರಾಗ ಐನಾರ್ ಮಕ್ಕಿಗೆ ಪ್ರೀತಿ ಮಾಡಾಕ ಇದ ಒಂದು ಕಾರಣ. ಆದ್ರ, ನಮಗೋ ಇರಸು ಮುರುಸು. ಚಿಗವ್ವ,

ದೊಡ್ಡವ್ವ, ಅಂತ ಕರಕೊಂತ ಇದ್ದೋರ ಮುಂದ ಮಣಿ ಹಾಕ್ಕೊಂಡು ಕುಂತು, ಅವರ ಮುಂದ ಕಾಲು ತೊಳ್ಯಾಕ ಪಾದ ಒಡ್ಡೂದು ಒಂಥರಾ ಅನಸ್ತಿತ್ತು. ಅವರು ಮಾತ್ರ, ಎಳೀ ಕೂಸಿನ ಸೇಂಗಾ ಕಾಳಿನಂಥ ಬೆರಳನ್ನು ಮುದ್ದು ಮಾಡೂವಷ್ಟೇ ಅಕ್ಕರೆಯಿಂದ, ಶ್ರದ್ಧೆಯಿಂದ ತೊಳೀತಿದ್ರು. ಆಮ್ಯಾಲೆ, ಎಡಿ ಇಟ್ಟಂಗ, ಎಲಿಯೊಳಗ ಮಾಡಿದ್ದಡಗಿ ಎಲ್ಲ ಬಡಸೋರು. ಅವಾಗೂ ಅಷ್ಟೆ ನೀಡುಮುಂದೆಲ್ಲ, ಉಪ್ಪು ಖಾರ ಒಂಚೂರು ಹೆಚ್ಚೂ ಕಡಿಮಿ ಆದ್ರ ಹೇಳಬೇಕವ್ವ, ನಾಲಗಿಗೆ ಮುಟ್ಟಸ್ಲಾರದೆ ಮಾಡೇವಿ.. ಹೆಚ್ಚೂ ಕಡಿಮಿ ಆಗೂದು ಸಹಜದ ಅನ್ನೋರು.

ತೂಕ ಹಾಕಿ, ಅಳತಿ ಮಾಡಿ ಅಡಗಿ ಮಾಡಿದ್ರೂ ಆಗಲಾರದಷ್ಟು ರುಚಿ ಆ ಊಟಕ್ಕ ಇರತಿತ್ತು. ಬಿಸೀ ಹೋಳಗಿ ಹಂಚಿನಿಂದ ಮುಗಚಿದ್ರ ನಾಕು ಮನಿ ದಾಟಿ ವಾಸನಿ ಘಂ ಅಂತ ಬರೂದು. ಅದ್ರೊಳಗೂ ಸುಮಿತ್ರ ತಡಕಲ್ ಅಂತಿದ್ರು. ನಾವೆಲ್ಲ ಚಿಗವ್ವ ಅಂತನ ಕರೀಯೂದು. ಅವರೂ ಹಂಗ ಇದ್ರು. ಅಗ್ದಿ ಗುಬ್ಬಿ ಹಂಗ. ಆದ್ರ ಹೋಳಗಿ ಮಾಡಾಕ ನಿಂತ್ರ, ನಮ್ಮೊಳಗಿನ ಹಸಿವು ಅವರ ಹಂಚಿನ ಸುತ್ತ ಸುಳೀತಿತ್ತು. ಅಂಥಾ ಹೋಳಗಿ ಅವು. ಹೂವಿನಷ್ಟ ಮೃದು. ಬೆಲ್ಲದಷ್ಟ ಸವಿ. ಅದರ ಮ್ಯಾಲೆ ಗಿಂಡಿಲೆ ತುಪ್ಪ ಬಗ್ಗಿಸಿ, ಒಂದೆರಡು ನಿಮಿಷ ನಮ್ಹತ್ರ ನಿಂದ್ರೋರು. ಬಿಸಿ ಹೋಳಗಿ ಆರಲಿ ಅಂತ ಅಥವಾ ಉಣಕೊಂತ ಬೆವರು ಸುರಸ್ತಿದ್ದ ನಮಗ ಸೆರಗಿಲೆ ಗಾಳಿ ಹಾಕ್ತಿದ್ರು. ಬಾಯಿಗೆ ಕೈಗೆ ಜಟಾಪಟಿ ಅನ್ನೂಹಂಗ ಊಟ ಸುರು ಆಗೂತ್ಲೆ, ಇನ್ನೊಂದು ಹೋಳಗಿ ತರಾಕ ಅವರ ದೌಡು ಅಡಗಿಮನಿ ಕಡೆ ಇರ್ತಿತ್ತು. ದಸರಾ ಅಂದ್ರ ಸುಮಿತ್ರಕ್ಕನ ಹೋಳಗಿ ನೆನಪು ಎಲ್ಲಾ ಕಡೆ ಇರೂದ.

ಸಂಜಿ ಆದ್ರ ಸಾಕು, ಬೀದರ್‌ನಾಗ, ಎಲ್ಲಾ ಹುಡುಗ್ರು, ಚಾಪಿ, ಶಾಲು ಹೊತ್ಗೊಂಡು ಶಾಲಾ ಮೈದಾನಕ್ಕ ಓಡ್ತಿದ್ವಿ. ಅಲ್ಲಿ ರಾಮ್‌ಲೀಲಾ ನಡೀತಿತ್ತು. ಹಿಂದಿಯೊಳಗ ರಾಮಕಥಾ ಪಠಣ ಆಗ್ತಿದ್ರ, ರಾಮಾಯಣದ ವೇಷಧಾರಿಗಳನ್ನು ನೋಡೂದೆ ಒಂದು ಚಂದ. ಬಯಲಿನ ಪಕ್ಕಕ್ಕ ಇದ್ದ ಬೇವಿನ ಮರದ ಕೆಳಗೆ ಹನುಮ, ಸೀತೆಯ ಪಾತ್ರಧಾರಿಗಳು, ಜರತಾರಿ ಪಂಚೆಯನ್ನೆತ್ತಿ, ಪಟ್ಟಾಪಟ್ಟಿ ಚಡ್ಡಿಯಿಂದ ಬೀಡಿ ತೆಗೆದು ಸೇದುತ್ತಿದ್ದರು. ಆ ಪಾತ್ರಧಾರಿಗಳ ಧೂಮಲೀಲೆ ಭಯ ಹುಟ್ಟಿಸಿದರೆ ಅವರ ವೇಷ ಭಕ್ತಿ ಹುಟ್ಟಿಸುತ್ತಿತ್ತು. ರಾಮ್‌ಲೀಲಾ ರಾತ್ರಿಯಿಡೀ ನಡೆಯುತ್ತಿತ್ತು. ಕಣ್ಣುಮುಚ್ಚುವ ಹೊತ್ತಿಗೆ ಮನೆಗೆ ಬಂದು ಮಲಗುತ್ತಿದ್ದೆವು. ಮರುದಿನ ಕತೆಯ ಹಿಂದೆ ಮುಂದೆ ಏನೂ ಗೊತ್ತಾಗುತ್ತಿರಲಿಲ್ಲ. ಆದರೂ ಬಾಯಿತೆರೆದು ನೋಡುತ್ತಿದ್ದೆವು. ಮಹಾನವಮಿಯ ದಿನ ಯುದ್ಧಕ್ಕೆ ಹೋಗುವ ಸಡಗರ.

ದಸರಾ ಹಬ್ಬದಲ್ಲಿ ಹೆಣ್ಣುದೇವರನ್ನು ಪೂಜಿಸಿದರೂ ಇದನ್ನು ಗಂಡಸರ ಹಬ್ಬ ಎಂದು ಕರೆಯಲಾಗುತ್ತದೆ. ನಾಗ ಪಂಚಮಿಗೆ ಹೆಣ್ಣುಮಕ್ಕಳೆಲ್ಲ ಹೊಸ ಬಟ್ಟೆಯ ಸಂಭ್ರಮದಲ್ಲಿದ್ದರೆ, ದಸೆರಾ ಗಂಡುಮಕ್ಕಳ ಖರೀದಿಯ ಭರಾಟೆ ಜೋರಾಗಿರುತ್ತದೆ. ಚಪ್ಪಲಿಯಿಂದ ಟೋಪಿವರೆಗೂ ಎಲ್ಲವೂ ಹೊಸತೇ ಆಗಿರಬೇಕು. ರಸ್ತೆಯ ಇಕ್ಕೆಲಗಳಲ್ಲೂ ಬಿಳಿ ವಸ್ತ್ರಗಳ ರಾಶಿಯೇ ಇರುತ್ತದೆ. ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಂತೂ ಈ ವಸ್ತ್ರ ರಾಶಿ ರಾಶಿ ತಂದೊಡ್ಡುತ್ತಾರೆ. ಜೊತೆಗೆ ಚಪ್ಪಲಿಯ ಮಾರಾಟವೂ ಜೋರಾಗಿರುತ್ತದೆ. ಮಹಾನವಮಿಯ ಅರ್ಧರಾತ್ರಿಯವರೆಗೂ ರಂಜಾನ್ ಮಾರುಕಟ್ಟೆಯಂತೆ ಸಂತಿ ಜೋರೆ ಇರ್ತದ.

'ನಂಪಾರಗ ಹೊಸ ಅರಬಿ ತೊಗೊಂಬದದ' ಅನ್ನುವ ಮಾತು ಅಲ್ಲಲ್ಲೇ ಕೇಳಿ ಬರ್ತದ. ಮಹಾನವಮಿಯ ಖುಷಿ ಅಂದ್ರ ಮನಿಮನಿಗೆ ತಾಟ ಹಂಚೂದು. ತಾಟನಾಗ ಚಕ್ಕಲಿ, ಉಂಡಿ ಗಾರ್ಗಿ, ಅವಲಕ್ಕಿ ಎಲ್ಲವನ್ನೂ ಎಲ್ಲಾ ಕಡೆಗೂ ಹಂಚ್ತಾರ. ನಮ್ಮನಿಯಿಂದ ಎಷ್ಟು ತಾಟು ಹೋದುವು ಎಷ್ಟು ತಾಟುಗಳು ಬಂದುವು ಅನ್ನುದೆ ಪ್ರತಿಷ್ಠೆಯ ಸಂಕೇತ. ತಾಟು ಕೊಡಾಕ ಬಂದ ಹೆಣ್ಮಕ್ಕಳೆಲ್ಲ, ಬನ್ನಿ ಮುಡಿಯಾಕ ಬರ್ರಿ ಅಂತ ಔತಣನು ಕೊಟ್ಟ ಹೋಗ್ತಾರ.

ವಿಜಯ ದಶಮಿ ದಿನ ಊರ ಹೊರಗ ಮಾರಿ ಉಬ್ಬಿಸಿಕುಂತ ಹನುಮಪ್ಪಗ ಒಂದು ನಮಸ್ಕಾರ ಮಾಡಿ, ಮಾರಾಟಕ್ಕಿದ್ದ ಬನ್ನಿ ಸೂಡು ಕೊಳ್ಳೂದು. ಅದ್ರೊಳಗ ಸಣ್ಣ ಬನ್ನಿ ಸಿಕ್ರ ಬಂಗಾರ ಸಿಕ್ಕಷ್ಟ ಸಂತೋಷ ಆಗ್ತದ. ಆದರ ಅಗಲೆಲಿ ಬನ್ನಿನ ಹೆಚ್ಚಿಗೆ ಸಿಗೂದು. ಅಮ್ಯಾಲೆ ದೊಡ್ಡೂರ ದೊಡ್ಡದೊಡ್ಡ ಅಂಗೈಯೊಳಗ ಸಣ್ಣೆಲಿ ಇಟ್ಟು, ಬನ್ನಿ ತೊಗೋರಿ, ಅಂದ್ರ, ಬನ್ನಿ ಕೊಟ್ಟು ಬಂಗಾರದ್ಹಂಗ ಇರ್ರಿ ಅಂತ ಹಿರ್ಯಾರು ಹರಸೋರು. ಮನಿ ಅಜ್ಜ, ಅಜ್ಜಿ, ಅಮ್ಮ ಮತ್ತು ಅಪ್ಪ ಒಂದಷ್ಟು ನಾಣ್ಯ ಇಟಕೊಂಡು ಕೂಡೋರು. ಬನ್ನಿ ಕೊಡೂಮುಂದ ಮುಚ್ಚಿಕೈಯ್ಯಾಗ ಈ ನಾಣ್ಯನೂ ಇಡೋರು. ಹಿಂಗಾಗಿ ನಮ್ಮ ಜೊತಿಗೆ ಒಂದು ಸಂಚಿನೂ ಇರ್ತಿತ್ತು. ಆ ಸಂಚಿಯೊಳಗ ನಾಣ್ಯ ಹಾಕ್ಕೊಂಡು ಝುಣಝುಣ ಅನಸ್ತಿದ್ವಿ.

ವಿಜಯದಶಮಿ ದಿನ ರಾಮ್‌ಲೀಲಾದ ಕೊನೆಯ ಅಂಕ, ರಾವಣನಿಗೆ ಸುಡೂದಿನ. ಸಿಡಿಮದ್ದನ್ನು ಹೊಟ್ಯಾಗ ತುಂಬಿ, ಬಿದರಿನ ರಾವಣ, ಕುಂಭಕರ್ಣ, ಮೇಘದೂತನನ್ನು ಮಾಡ್ತಿರ್ತಿದ್ದರು. ಈ ಕೊನಿ ಯುದ್ಧ ನೋಡಾಕ ಇಡೀ ಊರಿಗೆ ಊರೇ ಮೈದಾನದೊಳಗ ನೆರೀತಿತ್ತು. ಹುರಿದಿದ್ದ ಸೇಂಗಾ, ಕರದಿದ್ದ ಸೇಂಗಾ ತಿನ್ಕೊಂತ ಎಲ್ಲಾರೂ ಪರಸ್ಪರ ಶುಭ ಕೋರುಮುಂದ, ಶ್ರೀ ರಾಮ ರಾವಣನ ಹೊಟ್ಟೆಗೆ ಬೆಂಕಿ ಇದ್ದ ಬಾಣ ಬಿಡ್ತಿದ್ದ. ಆಕಾಶದ ತುಂಬೆಲ್ಲ ಸುರಸುರಬಡ್ಡಿ, ರಾಕೆಟ್ ನೆಗದ್ರ, ವಿಜಯ ದಶಮಿ ಮುಗದ ಸಂಕೇತ ಆಗ್ತಿತ್ತು.

ಆ ಬೆಳಕನಾಗ ಎಲ್ಲಾರ ಮಕ್ಕಳೂ ಎಲ್ಲಾರಿಗೂ 'ಬಂಗಾರ'ದ ಹಂಗ ಕಾಣೋರು. ಆ ಸೌಹಾರ್ದದೊಳಗ ಬದುಕು ಬಂಗಾರ ಆಗ್ತಿತ್ತು. ಬಂಗಾರನೇ ಬದುಕಾಗಿರುವ ಈ ದಿನದೊಳಗ, 'ಬನ್ನಿ' ಅಂತ ಬಾಯ್ತುಂಬ ಕರಿಯೂದ ಬಂಗಾರ ಆಗೇದ. ಈ ಸಲ ಅರೆ, ಬನ್ನಿ ಮುಡಿದು, ಬದುಕು ಬಂಗಾರ ಆಗಸೂನು. ಬಂಗಾರನೇ ಬದುಕು ಆಗೂದು ಬ್ಯಾಡ.

✵

---

**ವಿಜಯ ಮಲ್ಯ ಅವರ ಹೊಸ ಚಿತ್ರಗಳು**

ಬಂಟಿ ಔರ್ ಬಾಟಲಿ

ತಂ ದೇ ಬಸಂತಿ

ಸೋಡಾ ಅಕ್ಬರ್

ಜಬ್ ವಿ ಟೈಟ್

ಬೀರ್ ಇಂಪಾಸಿಬಲ್

ಕಭೀ ವೊಡ್ಕ ಕಭೀ ರಂ

ಹಂ ಟೈಟ್ ಹೂ ಚುಪ್ಕೆ ಸನಮ್

# ಆಯುಧ ಪೂಜೆ ರಿಸೈಕಲ್

**- ಕೃಷ್ಣ ಸುಬ್ಬರಾವ್**

**ರಾ**ಮಣ್ಣ ಆಯುಧ ಪೂಜೆಗೆ ಕರೆದಿದ್ದು ಸ್ವಲ್ಪ ಆಶ್ವರ್ಯ, ಹೆಚ್ಚು ಗಾಬರಿಯಾಯ್ತು. ದಸರಾದಲ್ಲಿ ಸರಸ್ವತಿ ಪೂಜೆಯನ್ನು ಗ್ರಾಂಡಾಗಿ ಮಾಡುತ್ತಿದ್ದು, ಈಗ ಆಯುಧ ಪೂಜೆಗೆ ಶಿಫ್ಟ್ ಆಗಿದ್ದು ಯಾವ ಕಾರಣಕ್ಕಾಗಿ ಅನ್ನಿಸಿತು. ಏನಾದರೂ ಒಂದು ವೇಳೆ ನಕ್ಸಲ್ ಆಗಿಬಿಟ್ಟನೋ? ಇತ್ತೀಚೆಗೆ ಅವನ ಬಡಾವಣೆಯಲ್ಲಿ ಪೋಲೀಸರು ನಾಲ್ಕು ಟೆರರಿಸ್ಟ್‌ಗಳನ್ನು ಬೇರೆ ಹಿಡಿದಿದ್ದಾರೆ ಎಂಬ ಭಯ ಕಾಡಿತು. ಚಿಕ್ಕಂದಿನಿಂದಲೂ ಅವನಿಗೆ ಶ್ರೀಮಂತರನ್ನು ಕಂಡರೆ ದ್ವೇಷ, ಬಡವರನ್ನು ಕಂಡರೆ ಅನುಕಂಪ ಇತ್ತು. ನಕ್ಸಲ್‌ನಾಗುವಷ್ಟು ಬುದ್ಧಿವಂತಿಕೆಯೂ ಇತ್ತು. ಯಾವ ವಯಸ್ಸಿನಲ್ಲಿ ಏನಾದರೂ ಆಗಬಹುದು - ಈ ಕಾಲದಲ್ಲಿ ಎಂಬ ಯೋಚನೆ. ಹೇಗಾದರೂ ಆಗಲಿ, ನೋಡಿ ಬರೋಣವೆಂದು ಹೊರಟೆ.

**ಆಯುಧ ಪೂಜೆ ಎಂದರೆ ಯಂತ್ರಗಳಿಗೇ ಪೂಜೆ ಮಾಡಬೇಕಿಲ್ಲ**

ಮನೆಯ ಹಜಾರದಲ್ಲಿ ಒನಕೆ, ಹಾರೆ, ರುಬ್ಬೋಗುಂಡನ್ನು ಅಲಂಕಾರಿಕ ಖುರ್ಚಿಗಳಲ್ಲಿ ವಿರಾಜಮಾನವಾಗಿ ಕೂಡಿಸಲಾಗಿತ್ತು. ಗೋಡೆಯಲ್ಲಿ ರಾರಾಜಿಸುತ್ತಿದ್ದ ರಾಮಣ್ಣನ ತಾಯಿ ಫೋಟೋಗೆ ಒಳ್ಳೆ ಮಲ್ಲಿಗೆಯ ಹಾರ ಹಾಕಲಾಗಿತ್ತು. ನಾನು ಹೋಗುವ ಹೊತ್ತಿಗೆ ಒನಕೆಗೆ ಆರತಿ ಮಾಡಲಾಗುತ್ತಿತ್ತು. ಇದೇನು ಒನಕೆ ಓಬವ್ವನ ದಿನಾಚರಣೆಯೋ ಅಥವಾ ಚಿಕ್ಕಂದಿನಿಂದಲೂ ಮಕ್ಕಳನ್ನು ಸಾಕಲು ಮನೆಮನೆಯಲ್ಲಿ ಮೆಣಸಿನ ಪುಡಿ ಕುಟ್ಟಿ ಜೀವನ ಸಾಗಿಸುತ್ತಿದ್ದ ರಾಮಣ್ಣನ ತಾಯಿಯ ಜನ್ಮ ಶತಮಾನೋತ್ಸವವೋ ತಿಳಿಯಲಿಲ್ಲ. ಇರಲಿ ಊರಿಗೆ ಬಂದಾಗಿದೆ, ಇನ್ನು ನೀರಿನ ವಿಷಯ ತಿಳಿಯುವುದು ಎಷ್ಟರಲ್ಲಿದೆ ಎಂದು ಪೂಜೆಯ ಸಂಭ್ರಮದಲ್ಲಿ ಭಾಗಿಯಾದೆ. ಬಂದವರಿಗೆಲ್ಲ ಕೈಗೆ ಒಂದು ಪ್ಯಾಕೆಟ್ ಕೊಡಲಾಯಿತು. ಅದೇನು? ಎಂದು ಕೇಳುವ ಮೊದಲೇ ರಾಮಣ್ಣ ಸ್ಪಷ್ಟಪಡಿಸಿದ.

ಈಚೆಗೆ ಜನರಿಗೆ ಯಂತ್ರಗಳ ಮೇಲೆ ನಂಬಿಕೆ ಹೊರಟುಹೋಗಿ ಹಳೆಕಾಲದ ಗಟ್ಟಿಮುಟ್ಟಾದ 'ಕೈ'ಗಳಲ್ಲಿ ವಿಶ್ವಾಸ ಮೂಡುತ್ತಿದೆ. ಅದಕ್ಕೆ ತನ್ನ ತಾಯಿ ಹೆಸರಿನಲ್ಲಿ 'ಸಾಕಮ್ಮ' ಬ್ರಾಂಡಿನಡಿಯಲ್ಲಿ ಅಡುಗೆಗೆ ಬೇಕಾದ ಸಾರಿನ ಪುಡಿ, ಸಾಂಬರಿನ ಪುಡಿ, ಚಟ್ನಿಪುಡಿ, ವಾಂಗಿಬಾತ್ ಪುಡಿಗಳನ್ನು ಗೃಹ'ಕೈ'ಗಾರಿಕೆಯಲ್ಲಿ ತಯಾರಿಸಿ ಮಾರಾಟ ಮಾಡುತ್ತಿರುವುದಾಗಿ ತನ್ನ ಪ್ರಾಜೆಕ್ಟ್ ಬಗ್ಗೆ ಹೇಳುತ್ತಾ, ಗೃಹಿಣಿಯರಿಗೆ ಕೆಲಸದ ಆಫರ್‌ನ್ನು ಕೊಟ್ಟ, ವೆಬ್‌ಸೈಟ್ ಹೆಸರನ್ನು ಹೇಳಿ, ತಾನು ಕೊಡುವ ಸಂಭಾವನೆ, ಭತ್ಯ ಮತ್ತು ಇತರೇ ಸೌಲಭ್ಯಗಳನ್ನು ಕೊಟ್ಟ, ಆಶ್ಚರ್ಯವಾಯಿತು, ಯಾವ ಐ.ಟಿ. ಕಂಪನಿಗೂ ಕಡಿಮೆಯಿರಲಿಲ್ಲ.

ಮರುದಿನ ಬೆಳಿಗ್ಗೆ 8 ರಿಂದ 'ನುಗ್ಗಿ–ನ್' ಇಂಟರ್‌ವ್ಯೂ ಇರುವುದಾಗಿ ತಿಳಿಸಿ ಮೊದಲು ಬಂದವರಿಗೆ ಆದ್ಯತೆಯೆಂದು ಹೇಳಿದ. ಅವನ ಆತ್ಮವಿಶ್ವಾಸ ಬೆಚ್ಚಿಬೀಳಿಸುವಂತಿತ್ತು. ಆಹ್ವಾನಿತರೆಲ್ಲ ಹೋದಮೇಲೆ ರಾಮಣ್ಣ ತನ್ನ ಹೊಸ 'ರಾಕೆಟ್' ಉಡಾವಣೆಯ ರಹಸ್ಯ ಬಿಚ್ಚಿಟ್ಟ. ಅವನ ಹೆಂಡತಿ ಈಗಾಗಲೇ ಒಂದು ಕಾರ್ಪೋರೇಟ್ ಕಂಪನಿಯಲ್ಲಿ ಒಂದು ತಿಂಗಳಿಂದ ಕೆಲಸ ಮಾಡಿ ಅನುಭವ ಪಡೆಯುತ್ತಿದ್ದಾಳೆ. ಅವಳು ಹಾಗೇ ಕೆಲಸ ಮುಂದುವರೆಸುತ್ತಾಳೆ, ರಾಮಣ್ಣ ತನ್ನ ವ್ಯವಹಾರ ಜ್ಞಾನದ ಬಳಕೆಯಿಂದ ಉದ್ಯಮ ಸ್ಥಾಪಿಸಿದ್ದ. ಜಯವಾಗಲಿ ಎಂದು ಮಸಾಲೆ ಪುಡಿ ತೆಗೆದುಕೊಂಡು ಹಾರೈಸಿದೆ.

ವಿಜಯಳನ್ನು 'ಅಪ್ಲೈ' ಮಾಡು ಎಂದು ಹೇಳಬೇಕೆಂದು ಯೋಚಿಸುತ್ತಾ ಆಟೋ ಹತ್ತಿದೆ. ಆಟೋಗೆ ಆಯುಧ ಪೂಜೆಯ ಅದ್ಧೂರಿ ಅಲಂಕಾರ ಮಾಡಲಾಗಿತ್ತು. ಅದರಲ್ಲೂ 'ಮೀಟರ್'ಗೆ ವಿಶೇಷ ಪೂಜೆ ಮಾಡಲಾಗಿತ್ತು. ಅದು ಸರಿಯೆನ್ನಿ. ಗ್ರಾಹಕರಿಂದ ಹೆಚ್ಚು ಹಣ ವಸೂಲಿ ಮಾಡುವ ಅಸ್ತ್ರವಲ್ಲವೆ? ಸಾಮಾನ್ಯವಾಗಿ ''ನಾವು ಯಾವುದನ್ನು ಪೂಜೆ ಮಾಡುತ್ತೇವೆಯೋ ಅದನ್ನು ಆಯುಧ ಪೂಜೆಯಂದು ಉಪಯೋಗಿಸುವುದಿಲ್ಲ, ಅಲ್ಲವೇ?'' ಎಂದು ಆಟೋದವನು ಮೀಟರ್ ಚಾಲು ಮಾಡಲು ಹೋದಾಗ ಹೇಳಿದೆ. ಅದಕ್ಕೆ ಅವನು ''ನಿಮ್ಮ ಅಭ್ಯಂತರವಿಲ್ಲದಿದ್ದರೆ ಬಿಡಿ, ಮೀಟರ್ ಹಾಕುವುದಿಲ್ಲ, ನಾನು ಹೇಳಿದಷ್ಟನ್ನು ಕೊಟ್ಟುಬಿಡಿ..'' ಎಂದು ನಕ್ಕಿದನು. ನಾನಾಡಿದ ಮಾತನ್ನು ನಾನೇ ನುಂಗಿ ನೀರು ಕುಡಿಯಬೇಕಾಯಿತು!

ಆಯುಧ ಪೂಜೆ ದಿನ ಎಲ್ಲ ದುಷ್ಟರು ತಮ್ಮ ಆಯುಧಗಳನ್ನು ಪೂಜೆ ಮಾಡಿ ಅದನ್ನು ಅಂದು ಉಪಯೋಗಿಸದೇ ಇದ್ದಾಗ ಆ ದಿನವನ್ನು ಅಹಿಂಸಾ ದಿನ ಅಥವಾ ಗಾಂಧಿ ದಿನಾಚರಣೆ ಎಂದು ಕರೆಯಬಹುದಲ್ಲ ಎಂದು ನಮ್ಮ ಸೂರಿ ಹೇಳ್ತಾನೆ. ಯಾವ ಯಾವ ಜನ ಯಾವ ಯಾವ ಅಸ್ತ್ರಕ್ಕೆ, ಶಸ್ತ್ರಕ್ಕೆ ಪೂಜೆ ಮಾಡಬಹುದು ಎಂದು ಯೋಚಿಸುತ್ತಿದ್ದಾಗ ಒಂದು ದೊಡ್ಡ ಪರಿಷ್ಕೃತ ಪಟ್ಟಿಯೇ ಸಿದ್ಧವಾಯಿತು. ಹೊಸ ಹೊಸ ಆಯುಧಗಳು ಅಲ್ಲಿ ಸೇರಿವೆ. ಕೋಮುವಾದಿಗಳು ಇತ್ತೀಚೆಗೆ ಈಶಾನ್ಯದವರನ್ನು ದಿಕ್ಕಾಪಾಲು ಮಾಡಲು ಬಳಸಿದ ಸಾಮಾಜಿಕ ತಾಣಗಳನ್ನು ಕಂಪ್ಯೂಟರ್‌ನಲ್ಲೇ ಇ–ಪೂಜೆ ಮಾಡಿರಬೇಕು. ನ್ಯಾಯಾಧೀಶರು ತಮ್ಮ ಹ್ಯಾಮರ್‌ಗೆ, ಟ್ಯೂಶನ್ ಹೇಳಿಕೊಡುವವರು ತಮ್ಮ ಸ್ಕೇಲ್‌ಗಳಿಗೆ, ಲೇಖಕರು ತಮ್ಮ ಲೇಖನಿಗೆ ಪೂಜೆ ಮಾಡಬಹುದು. ನಮ್ಮ ಹಳ್ಳಿಯಲ್ಲಿ ಸ್ಥಳದಲ್ಲೇ ನ್ಯಾಯ ತೀರ್ಮಾನ ಮಾಡುವ ಪಂಚಾಯಿತಿ 'ಕಟ್ಟೆ'ಗೆ ವಿಶೇಷ ಪೂಜೆ ಮಾಡಲಾಗಿತ್ತಂತೆ. ಹೆಂಗಸರೆಲ್ಲ ಅದಕ್ಕೆ ವಿವಿಧ ರಂಗೋಲಿ ಹಾಕಿ ಸಿಂಗರಿಸಿದ್ದರಂತೆ.

ನನ್ನ ತಲೆಗೆ ಹುಳಬಿಟ್ಟ ರಾಮಣ್ಣನಿಂದಾಗಿ ನನಗೂ ಹೊಸ 'ಅಸ್ತ್ರ'ದ ಸದ್ಬಳಕೆ ವಿಚಾರ ಹೊಳೆದಿದೆ. ನಿಮಗೆ ಗುಟ್ಟಾಗಿ ತಿಳಿಸುತ್ತೇನೆ. ನೀವು ನಿಮ್ಮಾಕೆಯ ಹೆಸರಿನಲ್ಲಿ ಒಂದು ಉದ್ಯಮ ಮಾಡಬಹುದು. ಹೆಣ್ಣುಮಕ್ಕಳಿಂದ ಯಾರೂ ಕಿತ್ತುಕೊಳ್ಳಲಾಗದ ಆಸ್ತಿಯೊಂದು ಇದೆ. ಅದು


ಏನನ್ನಾದರೂ ಪಡೆಯಲು ಉಪಯೋಗವಾಗುವ ಪ್ರಬಲ ಅಸ್ತ್ರ ಅದೇ 'ಕಣ್ಣೀರು', ಎಂದೂ ಬತ್ತದ ಗಂಗೆ. ಅದನ್ನು ಸುಮ್ಮನೆ ಹರಿದು ಹೋಗಲು ಬಿಡದೆ ಅದನ್ನು ಶೇಖರಿಸಿ ಸಂಸ್ಕರಿಸಿ ಚಿಕ್ಕ ಚಿಕ್ಕ ಬಾಟಲ್‌ಗಳಲ್ಲಿ ಹಾಕಿಟ್ಟರೆ, ಅದು ಉಪಯೋಗಕ್ಕೆ ಬಂದೀತು. ಸ್ವಾಭಾವಿಕವಾಗಿ ಅಳಲು ಬಾರದ ನಟಿಯರಿಗೆ ಗ್ಲಿಸರಿನ್‌ಗೆ ಪರ್ಯಾಯವಾಗಿ ಉಪಯೋಗಿಸಬಹುದು. ಇಪ್ಪತ್ತನಾಲ್ಕು ಘಂಟೆ ಸೀರಿಯಲ್‌ಗಳು ಇರುವಾಗ ಅದಕ್ಕೆ ಒಳ್ಳೆ ಡಿಮ್ಯಾಂಡ್ ಇದ್ದೇ ಇರುತ್ತೆ. ಅದನ್ನು ಸೀರಿಯಲ್ ನೋಡುವ ಪ್ರೇಕ್ಷಕರೇ ಒದಗಿಸುತ್ತಾರೆ. ಇದೊಂದು ತರಹ ಕೆರೆಯ ನೀರನ್ನು.... ರೀ–ಸೈಕಲ್ ಮಾಡಿದ ಹಾಗೆ. ತ್ವರೆ ಮಾಡಿ. ಈಗಾಗಲೇ ಸೀರಿಯಲ್ ನಿರ್ಮಾಪಕರು ಪೇಟೆಂಟ್ಸ್ ರೈಟ್‌ಗೆ ಅರ್ಜಿ ಸಲ್ಲಿಸಲು ಹವಣಿಸುತ್ತಿದ್ದಾರೆ ಎಂಬ ಸುದ್ದಿ ಬಂದಿದೆ.

✵

---

*ಕೊರವಂಜಿಯಿಂದ*

## ಮಹಾತ್ಮರ ಹೆಜ್ಜೆಗಳಲ್ಲಿ....



# ತುಂತುರುತುಂತುರುತುಂತುರುತುಂತುರುತುಂತುರುತುಂತುರುತುಂತುರು

– ದಂನಆ

- ಈಗ ಎಲ್ಲವೂ ಇ–ಮಯ. ಇ–ಗವರ್ನೆನ್ಸ್, ಇ–ಟೆಂಡರ್, ಇ–ಕೌನ್ಸೆಲಿಂಗ್, ಇ–ಡಯಾಗ್ನಿಸಿಸ್, ಇ–ಫೈಲಿಂಗ್... ಆದುದರಿಂದಲೇ ಗಣೇಶನ ವಾಹನ ಸಹ ಇ–ಲಿ ಆಗಿದೆ.
- ಆನೆಯ ಮರಿಯನ್ನು ಇಲಿಫೆಂಟ್ ಎಂದು ಕರೆದರೆ ಹೇಗೆ?
- ಯಾವುದೂ ಅಸಾಧ್ಯವಲ್ಲ, ನೀವು ಮಾಡದೇ ಇರಬೇಕಾದಾಗ!
- *Behind a successful politician there is a baba, behind his downfall there is a babe.*
- ಜಾವೆದ್ ಅಕ್ತರ್ ಅವರನ್ನು ಷಬಾನ ಆದ್ಮಿ ಎಂದೂ ಕರೆಯಬಹುದಲ್ಲವೆ? ಹಾಗೆಯೇ ಮನಮೋಹನ್ ಸಿಂಗ್ ಅವರನ್ನು ಮೌನಮೋಹನ್ ಸಿಂಗ್ ಎಂದು ಕರೆದರೆ ಹೇಗೆ?
- ಭಾಜಪ ನಿರ್ಮಿಸಲಿರುವ ಚಿತ್ರ: **''ವೈ ದಿಸ್ 'ಕೋಲ್'ವೆರಿ ಡಿ''.**

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಗೂಬೆ ಎಂದು ಜರಿದರೆ ವ್ಯಥೆ ಪಡಬೇಕಿಲ್ಲ, ನೈಟ್ ವಿಷನ್ ಸಾಮರ್ಥ್ಯವಿದೆ ಎಂದು ಹೆಮ್ಮೆ ಪಡಬಹುದು.
- *The philosophy of one century is the common sense of the next.*
- ಇತ್ತೀಚೆಗೆ ನಟ ಹಷ್ಮಿ ಹಿರೋಯಿನ್‌ಗಳ ಬಾಯಿ ಮುಚ್ಚಿಸುತ್ತಿದ್ದಾನೆ ಎಂದು ಸುದ್ದಿ ಚುಂಬನದ ಮೂಲಕ.
- ಬಾತ್ ರೂಂ ಸಿಂಗರ್ ಎಂದರೆ ಗೊತ್ತು. ಬಾತ್ ರೂಂ ಆಕ್ಟರ್ ಎಂದರೆ?
- ಶರದ್ ಪವಾರ್ ಖೇತಿ ಮಂತ್ರಿ ನಿಜ ಆದರೆ ಅವರು ಯಾವಾಗಲೂ ಕ್ರಿಕೆಟ್ ಖೇಲ್ತಿ ರಹ್ತೇ ಹೈ ಎಂಬ ಆಪಾದನೆ ಅವರ ಮೇಲಿದೆ. ಹೌಸ್ ದಟ್....?
- *Most Presidents make history. Pratibha Patil made geography.*
- ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮಲೆಯಾಳಿಗಳಿರುವ ಜಾಗಗಳಲ್ಲಿ ರಾಜಧಾನಿ ತಿರುವನಂತಪುರ 2ನೆಯ ಸ್ಥಾನ ಪಡೆದುಕೊಳ್ಳುತ್ತದಂತೆ. ಮತ್ತೆ ಮೊದಲನೆಯ ಸ್ಥಾನ? ದುಬೈ.
- ಸುಯಿಸೈಡ್ ಪ್ರಿವೆನ್ಷನ್ ಡೆ ದಿವಸಾನೂ ಸಾವಿರಾರು ಮಂದಿ ಆತ್ಮಹತ್ಯೆ ಮಾಡಿಕೊಂಡರಂತೆ.
- *Every day may not be good. But there is SOMETHING GOOD in every day!!!*
- *True generosity doesn't start when you have something to give, but rather when there's nothing in you that's trying to take.*
- *If there's one thing I'm good at, it's growing older.*
- ನಿನ್ನ ಏಕಾಂತವನ್ನು ಮತ್ಯಾರೋ ಪ್ರೀತಿಸಲು ಆರಂಭಿಸಿದ ದಿನ ನೀನು ನಿಜಕ್ಕೂ ಏಕಾಂಗಿ.

❋

# ಗೂಡು ಸೇರು(ಸೇರಿಸು)ವ ಪರದಾಟ!

- ವಾಣೀ ಸುರೇಶ್

**ಇ**ವತ್ತು ಮಧ್ಯಾಹ್ನ ನೋಡಿ, ಯಾವ್ದೋ ದುರ್ಘಳಿಗೇಲಿ ನಮ್ಮೂರಿನಲ್ಲಿ ನಡೆಯೋ ಅರೇಂಜ್ಡ್ ಮ್ಯಾರೇಜುಗಳಿಗೂ ಇಲ್ಲಿ ಮನೆ ಕೊಳ್ಳೋ ವ್ಯವಹಾರಕ್ಕೋ ಏನೋ ಒಂದು ವಿಚಿತ್ರ ಸಾಮ್ಯತೆ ಕಾಣಿಸ್ತು. ಇಲ್ಲಿ ಸ್ವಲ್ಪ ನೋಡಿ:

*''ಏನ್ರೀ, ನಮ್ಮ ಸುಧಾ(ಕರ್)ಗೂ ಇನ್ನೇನು ಮೂವತ್ತಾಗ್ತಾ ಬಂತು. ಇನ್ನೂ ಇಲ್ಲೀವರ್ಗೂ ಯಾವ ಗರ್ಲ್‌ಫ್ರೆಂಡ್ದೂ ಇರೋ ಮಟ್ಟು ಕಾಣಿಸ್ಲಿಲ್ಲ. ಎಲ್ಲರ ಹಾಗೆ ಅಮೆರಿಕಾ ಆಸ್ಟ್ರೇಲಿಯಾಂತಿರೋದು ಬಿಟ್ಟು ಅಪ್ಪ ನೆಟ್ಟ ಆಲದ ಮರದ ನೆರಳೇ ತಂಪು ಅಂತ ಇವನೂ ಇಲ್ಲೇ ಹಾಯಾಗಿದ್ದುಬಿಟ್ಟಿದ್ದಾನೆ. ಅದ್ರಿಂದೇನು ಗುನುಗು ಇಲ್ದೇದ್ರೂ, ಮ್ಯಾಕ್ ಡೊನಾಲ್ಡ್ಸ್, ಸ್ಟಾರ್ ಬಕ್ಸ್ಗೂ, ಪೈನ್‌ಟ್ರೀಗಳೂಂತ ಹಾತೊರೆಯೋ ಈಗಿನ ಹುಡುಗೀರ್ಗೆ ಆಲದ ಮರದ ಬಿಳಲುಗಳು ಬರಿ ಗೋಜಲಾಗಿ ಕಾಣಿಸಲ್ವೇಂತ ವರಿ ನಂಗೆ..''*

''ಹೇ ವಿಕ್ಕೀ, ಈ ಮನೆ ಸಾಕಾಯ್ತು ಕಣೋ. ಇನ್ನು ಮೇಲೆ ಸರಿಯಾಗಿರೋ ಸ್ಕೂಲ್ ಡಿಸ್ಟ್ರಿಕ್ಟ್ ಕಡೆ ಮೂವ್ ಮಾಡಬೇಕು ಅಂತ ಮೊದಲಿಂದ ಹೇಳ್ತಿದ್ದೆ. ಇಲ್ಲಿ ನೋಡಿದರೆ ಮೂರು ರೂಮಿಗೆ ಸೇರಿ ಎರಡೇ ಅಟ್ಯಾಚ್ಡ್ ಬಾತ್‌ರೂಮು, ವಾಕ್ ಇನ್ ಕ್ಲಾಸೆಟ್ಟೇ ಇಲ್ಲದ ಮಾಸ್ಟರ್ ಬೆಡ್‌ರೂಮು, ಅಲ್ಲದೇ ಹಿಂದಿನ ಯಾರ್ಡ್‌ನಲ್ಲಿ ನಮ್ಮೂರ್ದಂತ ಒಂದು ಸ್ವಿಮಿಂಗ್ ಪೂಲ್ ಬೇಡವಾ, ನೀನೇ ಹೇಳು...''

*''ಸ್ವಲ್ಪ ತಡಿ ಕಮ್ಲೂ, ಅವನಿಗೇ ಇಲ್ಲದ ಅವಸರ ನಿಂಗ್ಯಾಕೆ? ಮೊದಲು ಅವನ ಪ್ಲಾನ್ಸೇನೂಂತ ವಿಚಾರಿಸೋಣ ತಡೀ.''*

*''ಹಾಗಂದ್ರಾಗತ್ತೇನ್ರೀ, ನಮ್ಮ ಡ್ಯೂಟಿ ನಾವು ಮಾಡ್ಬೇಡ್ವೇ? ಅದಕ್ಕೇ ನಾನು ಹೇಗಾದ್ರಾಗಲೀಂತ ಆ ಮ್ಯಾಚ್‌ಮೇಕರ್ ಮೀನಾಕ್ಷಮ್ಮ ಸಿಕ್ಕಿದಾಗ ಅವರ ಕಿವೀಮೇಲೊಂದ್ಮಾತು ಹಾಕಿದ್ದೆ. ನಿನ್ನೆ ಅವರಾಗ್ಲೇ ಒಂದಿಷ್ಟು ಅಡ್ರೆಸ್‌ಗಳನ್ನ, ಫೋಟೋ ಸಮೇತ ತಂದ್ಕೊಟ್ಟು ಹೋಗಿದ್ದಾರೆ. ಇಲ್ನೋಡಿ.''*

''ವೇಯ್ಟ್ ಎ ಬಿಟ್ ಜ್ಯೋತಿ, ಒಳ್ಳೆಯ ಎ.ಪಿ.ಎ. ರೇಟಿಂಗ್ ಇರೋ ಸ್ಕೂಲ್‌ಡಿಸ್ಟ್ರಿಕ್ಟ್‌ನಲ್ಲಿ ನಿನ್ನ ಟೇಸ್ಟಿಗೆ ತಕ್ಕ ಮನೆ ಸಿಗ್ಬೇಕೂಂದ್ರೇನು ಸುಮ್ನೆ ಆಯ್ತೇ? ಮೊದಲು ಲೋನ್ ರೆಡೀ ಮಾಡ್ಕೋಬೇಕು, ಯಾವ್ದಾದ್ರೂ ಸರ್ಯಾದ ರಿಯಾಲ್ಟರ್ ಹಿಡೀಬೇಕು, ಆಮೇಲೆ ಅವರು ಕೊಡೋ ರೆಫರೆನ್ಸ್ ಪ್ರಕಾರ ವೀಕೆಂಡ್ಸ್‌ನಲ್ಲಿ ಹೋಂ ಶಾಪಿಂಗ್ ಶುರು ಹಚ್ಕೋಬೇಕು. ಅದಂತೂ ಎಷ್ಟು ಟೈಂ ಕನ್ಸೂಮಿಂಗ್ ಟೇಡಿಯಸ್ ಪ್ರಾಸೆಸ್ಸೂ.....''

*''ಎಲ್ಲೀವರ್ಗೂ ಬಂತು ಮ್ಯಾ.ಮೇ.ಮೀ. ನೋರ ಜೊತೆ ಮೀಟಿಂಗ್ಸೂಂದ್ರಾ? ನಾನು ಅದನ್ನೇ ಹೇಳ್ಬೇಕೂಂತ ಬಂದೆ. ಅದೇ, ಅವತ್ತು*

*ಆಕೆ ಹೇಳಿದ್ದೋರಲ್ಲಿ ಒಬ್ಬರು ಕೃಷ್ಣಸ್ವಾಮೀಂತ ಬಂದಿದ್ರಲ್ಲ ಸದಾಶಿವನಗರದಿಂದ – ಅವರ್ದನ್ನ ಸ್ವಲ್ಪ ಮುಂದುವರಿಸಿದರೆ ಹೇಗೇಂತ.''*

''ಪರ್ವಾಗಿಲ್ಲ ವಿಕ್ಕೀ, ಈ ನಿನ್ನ ರಿಯಾಲ್ಟರ್‍ನ ಸ್ಟೀವ್‌ಉ! ನಾವು ಷಾರ್ಟ್‌ಲಿಸ್ಟ್ ಮಾಡಿರೋ ಮನೆಗೆ ನಿನ್ನೆ ಸರಸರಾಂತ ಎಷ್ಟೊಂದು ಸ್ಟ್ರಾಟೆಜೀಗಳನ್ನ ಸಜೆಸ್ಟ್ ಮಾಡಿದ ನೋಡು!''

*''ಏನೋಂತಿದ್ದೆ ರೀ ಈಕೇನ್ನ! ಅದೇ ಮ್ಯಾ.ಮೇ.ಮೀ.ನೋರು. ನಾನವತ್ತು ಅವರಿಗೆ ಹೇಳಿದ್ದನ್ನೆಲ್ಲಾ ಚಾಚೂ ತಪ್ಪದೇ ಆ ಕೃಷ್ಣಸ್ವಾಮಿ ಹೆಂಡ್ತೀಗ್ಹೇಳಿ, ಡಿಸ್ಕಸ್ ಮಾಡ್ಕೊಂಡು ಬಂದಿದಾರಂತೆ. ಅದನ್ನೆಲ್ಲಾ ನಮಗೆ ತಿಳಿಸಕ್ಕೆ ಇವತ್ತು ಮಧ್ಯಾಹ್ನ ಬರ್‍ತೀನೀಂದ್ರು. ನೀವ್ರೂ ಮನೇಲೇ ಇರ್‍ತೀರಾ ತಾನೇ?''*

''ಜ್ಯೋ, ಈ ಶನಿವಾರ ಮಧ್ಯಾಹ್ನ ಏನೂ ಇಟ್ಕೋಬೇಡ. ಆ ಮನೆ ಇನ್ಸ್‌ಪೆಕ್ಷನ್ಗೆ ಹೋಗ್ಬೇಕಂತೆ. – ಸ್ಟೀವ್ ಹೇಳಿದ. ಪ್ರಾಪರ್ಟಿಯ ಫೌಂಡೇಶನ್ನು, ರೂಫ್ ಕಂಡೀಶನ್ನು, ಪೆಸ್ಟ್ ಕಂಟ್ರೋಲು – ಈ ಎಲ್ಲಾ ಪಾಯಿಂಟ್ಸ್‌ನೂ ಸರಿಯಾಗಿ ಗಮನಿಸಬೇಕು. ಮರೀಬೇಡಾ ಆಯ್ತಾ?''

*''ಶಾಮ್ಲೂ ಪುನಃ ಕೃಷ್ಣಸ್ವಾಮಿ ಫೋನ್ ಮಾಡಿದಾರಲ್ಲೇ. ಅವರ ಮಗಳೇನೋ ಮತ್ತೆ ಇವನ್ಜೊತೆ ಅದೇನೋ ಡಿಸ್ಕಸ್ ಮಾಡ್ಬೇಕಂತೆ. ಈ ವೀಕೆಂಡೂ ಇವನು ಫ್ರೀಯಾಗಿರ್‍ತಾನಾಂತ ಕೇಳ್ತಿದಾರೆ''*

''ವಿಕ್ಕೀ, ನಂಗ್ಯಾಕೋ ಹೋದ್ಸಲ ಆ ಮನೇನ ನೋಡ್ಕೊಂಡ್ಬಂದದ್ದು ಸಾಕಾಗ್ಲಿಲ್ವೋ. ಈ ಶನಿವಾರ ಮಧ್ಯಾಹ್ನಾನೂ ಒಂದ್ಸಜ್ಜೆ ಹೋಗ್ಬಂದರೆ ವಾಸಿ ಅನ್ನಿಸತ್ತೆ ಓಕೆನಾ?''

*''ಇದೇನ್ರೀ, ಹೀಗೆ ರಾಗ ಎಳೀತಿದಾರಲ್ಲ ಅವರುಗಳು...! ನಿಮಗೂ ಹಾಗೆ ಅನ್ನಿಸಲ್ವೇ?''*

''ನಂಗೊತ್ತಿತ್ತು....! ನಾನು ಹೇಳ್ಲಿಲ್ವಾ ವಿಕ್ಕೀ! ನೋಡು, ಆ ಮನೆಯ ಕಬೋರ್ಡುಗಳು, ಫೈರ್‌ಪ್ಲೇಸು, ವಾಕ್‌ಇನ್ ಕ್ಲಾಸೆಟ್ಟು ಅಲ್ಲೆಲ್ಲಾ ಕಡೇನೂ ನಾವು ಕೇಳಿರೋ ಚೇಂಜಸ್ಸನೆಲ್ಲಾ ಲೆಖ್ಖಹಾಕಿ, ನಾವೂ ಸ್ವಲ್ಪ ನೆಗೋಶಿಯೇಟ್ ಮಾಡೋಣ. ಏನಂತೀ?''

*''....ಅಂದ್ಹಾಗೆ ಶಾಮಲೂ, ನಾಳೆಯಿಂದ ಛತ್ರ ಹುಡುಕಕ್ಕೆ ಶುರುಮಾಡ್ತಾರಂತೆ. ಅಬ್ಬಾ ಸಾಕಾಯ್ತು. ಅಂತೂ ಒಂದು ಹದಕ್ಕೆ ಬಂದ್ಹಾಗಾಯ್ತಲ್ಲ ಸದ್ಯ. ಇನ್ನು ಪರ್ವಾಗಿಲ್ಲ.''*

''ಎಕ್ಸಾಸ್ಟ್ ಆಗ್ಹೋಗಿದೀನಿ ಕಣೇ. ಜ್ಯೋ ನಾಳೆ ಇನ್ನೂ ಹೌಸ್ ಇನ್ಶೂರೆನ್ಸ್ ಕವರೇಜ್‌ಗೆ ವ್ಯವಸ್ಥೆ ಮಾಡಿ ಅದನ್ನ ರಿಯಾಲ್ಟರ್ಸ್‌ಗೆ ತಲುಪಿಸಿ, ಕಂಟಿನ್ಜೆನ್ಸೀನ.... ಅಯ್ಯೋರಾಮ, ನನ್ನ ಪ್ರಾಜೆಕ್ಟಿನ ಇಂಪಾರ್ಟೆಂಟ್ ಮೀಟಿಂಗ್ಬೇರೆ ಇದೇಂತಾನೇ ಮರ್‍ತುಬಿಟ್ಟಿದ್ದೆ. ಜ್ಯೋ, ಲಂಚ್ ಪ್ಯಾಕ್ ಮಾಡ್ಬೇಡ ನಾಳೇಗೆ, ತಿನ್ನಕ್ಕೆ ಟೈಮಿರಲ್ಲ.''

*''ಸಂಜೆಗೆ ಒಂದಿಷ್ಟು ಒಳ್ಳೆಯ ಪಕೋಡ, ಸಜ್ಜಿಗೆ ಮಾಡಿಟ್ಬಿಡು ಶಾಮ್ಲೂ. ಫೈನಲ್ಲಾಗಿ ಎಲ್ಲಾನೂ ಮಾತಾಡಕ್ಕೆ ಅವರು ಬರ್‍ತಾರಂತೆ.''*

“ಜ್ಯೋ, ಮಂಗಳವಾರ ಫೈನಲ್ ವಾಕ್‌ಥ್ರೂ ಇದೆ. ಮನೆಯ ಪೈಂಟು, ಫಾನ್ಗಳು, ಏಸೀ, ವಾಷಿಂಗ್ ಮೆಷೀನ್, ಡಿಷ್ ವಾಷರ್ ಎಲ್ಲಾ ಸರಿಯಾಗಿ ಕೆಲಸ ಮಾಡ್ತಾ ಇದೆಯಾ ಅಂತ ಚೆಕ್ ಮಾಡ್ಬೇಕು. ಸ್ವಲ್ಪ ಪುರೊಸ್ತು ಇಟ್ಕೊಂಡ್ಬಾ, ಓ.ಕೇ.?”


*“ಕಾಮ್ಲೂ, ಛತ್ರ ಸರಿಹೋಯ್ತೂಂತೀಯಾ? ನಂಗೇನೋ ಆ ಡೈನಿಂಗ್ ಹಾಲು ಸ್ವಲ್ಪ ಕಿಷ್ಕಿಂಧೇನೇ ಅನ್ನಿಸ್ತು. ಅದ್ಸರಿ, ನಾಳೆ ಹೋಗಿ ಲಗ್ನ ಪತ್ರಿಕೇನ ಯಾವಾಗಿಟ್ಕೋಬೇಕೂಂತ ಶಾಸ್ತ್ರಿಗಳನ್ನ ಕೇಳ್ಕೊಂಡು ಬರೋಣ. ಅಂದ್ಹಾಗೆ ಸುಧಾಕ್ರ ಎಲ್ಲೀಂದೆ? ಓ ಅವಳ ಜೊತೆ ಸಿನಿಮಾಗ್ಹೋಗಿದಾನೇಂದ್ಯಾ. ಸರೀ ಬಿಡು. ಊಟಕ್ಕೀಗ ಒತ್ತುಶಾವಿಗೆ – ಆಂಬೊಡೆ ಇದೇಂತಂದೆ ಅಲ್ವೇ? ಬಂದೆ ನಡೀ....”*

“ಹಾಯ್ ಜ್ಯೋ, ಇನ್ನೂ ಎಷ್ಟೊತ್ತಾಗತ್ತೆ ಆಫೀಸಲ್ಲಿ? ಮನೇ ವಿಷ್ಯಾನಾ? ಮ್... ಲೋನ್ ಪೇಪರ್ಸ್‌ನ ಅವರು ಟೈಟಲ್ ಡೀಡ್ ಮಾಡುಕ್ಕೋಸ್ಕರ ಕಳಿಸಿದಾರಂತೆ. ಇವತ್ತು ಸ್ಟೀವ್‌ಗೆ ಅವನ ಫೈನಲ್ ಚೆಕ್ ಕೊಟ್ಟೆ. ಗುರುವಾರ ಬೆಳಗ್ಗೆ ಕೌಂಟಿ ಆಫೀಸಲ್ಲಿ ರೆಜಿಸ್ಟ್ರೇಷನ್ನು. ಶುಕ್ರವಾರ ಬೆಳಗ್ಗೆ ಮನೆ ಕೀ ಸಿಗತ್ತೆ. ಅತ್ಲಾಗಿ ಅವತ್ತು ಸಂಜೇನೇ ಹೋಗಿ ಹಾಲುಕ್ಕಿಸಿಬಿಡೋಣ. ಅದ್ಸರಿ, ಈಗ ರಾತ್ರಿ ಊಟಕ್ಕೆ ಬರೀ ಪಾಸ್ಟಾ ಬೇಯಿಸಿಟ್ಟರೆ ಆಗತ್ತೆ ತಾನೆ? ಫ್ರಿಜ್ಜಲ್ಲಿ ನೋಡ್ದೆ. ಪಾಸ್ಟಾ ಸಾಸ್ ಬೇಕಾದಷ್ಟಿದೆ ಸದ್ಯ.”

✵

---

*ಕೊರವಂಜಿಯಿಂದ*




***ಅಪ್ಪಾ ಅಪ್ಪಾ ಆ ದೊಡ್ಡ ಬೊಂಬೆ ಕೊಂಡ್ಕೊಳ್ಳೋಣಾಪ್ಪ..***

# 'ಬರ ' ದರ್ಶನ

**- ಇ.ಆರ್. ರಾಮಚಂದ್ರನ್**

**ಟೀ**ವಿ ನೋಡುತ್ತಿದ್ದ ಅಜ್ಜಿ 'ಏನೋ, ಅನ್ಯಾಯ' ಎಂದು ಉದ್ಗರಿಸಿದರು.

'ಏನಾಯ್ತಜ್ಜಿ?'

'ಹನ್ನಾನಹಳ್ಳಿಗೆ ಎಷ್ಟು ಕಾರು ಬಂದಿದೇ ಅಂತ ಎಣಿಸ್ತಾ ಇದೀನಿ. ಮುಗೀತಾನೇ ಇಲ್ಲ! ಅಲ್ಲ, ಮೈಸೂರಿನಿಂದ 15 ಕಿ.ಮೀ. ಇರೋ ಬಿಳಿಕೇರಿ ಹತ್ರ ಇರೋ ಹಳ್ಳೀಗೆ 30 ಕಾರುಗಳು ಬಂದಿವೆ. ಮಾಜಿ ಮುಖ್ಯ ಮಂತ್ರಿ, ಡೆಪ್ಯುಟಿ ಮುಖ್ಯ ಮಂತ್ರಿ ನಂಬರ್ 1, ಡಿಸ್ಟ್ರಿಕ್ಟ್ ಮಿನಿಸ್ಟರ್, ಅಧಿಕಾರಿಗಳು, ಜೊತೆಗೆ ಪಿ.ಎ. ಮತ್ತು ನಾಯಿ, ಗುಳ್ಳೆ ನರಿ.. ಆಮೇಲೆ ಇದೆಲ್ಲವನ್ನು ಫೋಟೋ ತೆಗೆದು ಬರೆದು ಛಾಪಿಸೋದಕ್ಕೆ ಪ್ರೆಸ್‌ನವರು, ಟೀವಿಯಲ್ಲಿ ಹಾಕುವುದಕ್ಕೆ ಚಾನಲ್ನವ್ರು...'

'ಯಾಕಿರಬಹುದು ಅಜ್ಜಿ? ಡೀನೋಟಿಫೈ ಮಾಡಿ ಅಲ್ಲಿ ಏನಾದ್ರೂ ಸೈಟುಗಳು ಫ್ರೀಯಾಗಿ ಹಂಚ್ತಿದಾರಾ? ಯಾವುದಾದರೂ ಸ್ವಾಮಿಗಳ ಪಾದ ಪೂಜೆನಾ? ಯಾವುದಾದರೂ ಕೋಲ್ ಮೈನ್ಸ್ ಹರಾಜು ಹಾಕ್ತಾ ಇದಾರಾ? ಅಲ್ಲಿ ಏನು ವಿಷಯ ಅಜ್ಜಿ?'

'ಎಲ್ಲಾರೂ ಕರ್ನಾಟಕದಲ್ಲಿರೋ ಬರಾನಾ 'ಸ್ಟಡಿ' ಮಾಡ್ಬೇಕೂಂತ ಬಂದಿದಾರೋ! ಹಿಂದೊಮ್ಮೆ ಬರಾನ ಸರಿಯಾಗಿ ತಿಳಕೊಂಡು ಅದ್ರ ಪ್ರಭಾವ ನಮ್ಮ ಜೀವನದ ಮೇಲೆ ಹೇಗೆ ಬೀಳುತ್ತೆ ಅಂತ ತೋರ್ಸೋಕೆ ಪಿಕ್ಚರ್ ತೆಗೆದ್ರು ಎಮ್.ಎಸ್. ಸತ್ಯು. ಅವರು ಬರಾನ ಸ್ಟಡಿ ಮಾಡ್ಲಿಲ್ಲ ನೋಡು.'

**'ಬರ 'ವನ್ನು ಇದೇ ರೀತಿ ಕಾಪಾಡಿ ಕೊಂಡು ಬಂದ್ರೆ 'ಬರ ಹೆರಿಟೇಜ್ ಸೈಟ್' ಅಂತ ಘೋಷಿಸುವ ಹಾಗೆ ಯಾಕೆ ಮಾಡಬಾರದು?**

'ಅದು ನಿಜ... ಇವ್ರೆಲ್ಲ 30 ಕಾರಲ್ಲಿ ಹೋಗಿ ಎಷ್ಟು ಹೊತ್ತಿದ್ರು ಅಜ್ಜಿ?'

'ಅರ್ಧಘಂಟೆ ಇದ್ರೂ ಅಂತಾರೆ ಟೆಲಿವಿಷನ್ನವ್ರು.'

'ಅಂದ್ರೆ..... ಒಂದು ಕಾರ್ಗೆ ಒಂದು ನಿಮಿಷ ಆಯ್ತು..... ಸರಿಯಾಗೇ ಇದೆ. ತಮಗೆ ಪ್ರಯೋಜನವಾಗದಿದ್ದರೆ ರಾಜಕಾರಣಿಗಳು, ಇದಕ್ಕಿಂತ ಹೆಚ್ಚು ಯಾವುದಕ್ಕೂ ಟೈಮ್ ಕೊಡೊಲ್ಲ.... ಹಳ್ಳೀಯೋವ್ರು ಇಷ್ಟು ಕಾರ್ನ ಒಟ್ಟಿಗೆ ಅವ್ರ ಹಳ್ಳೀಲಿ ಯಾವತ್ತೂ ನೋಡಿರಲ್ಲ..'

'ನಮ್ಮ ಫ್ರೆಂಡ್ ಸಾಫ್ಟ್‌ವೇರ್ ಸೀತಮ್ಮ ಹೇಳ್ತಿದ್ದರು ಡೆಲ್ಲಿಯಿಂದ ಮಿನಿಸ್ಟರ್ಸು ಬರ್‍ತಾ ಇದಾರಂತೆ... ಅವರ್ದೇ ಬೇರೆ ಸ್ಟಡಿ ಅಂತೆ. ಏನೋ ಡ್ರಾಫ್ಟ್ ಸ್ಟಡಿ ಮಾಡ್ತಾರಂತೆ.'

'ಡ್ರಾಫ್ಟ್ ಅಲ್ಲ ಅಜ್ಜಿ... ಡ್ರೌಟ್. ಇಂಗ್ಲಿಷ್ನಲ್ಲಿ ಬರಕ್ಕೆ ಡ್ರೌಟ್ ಅಂತ.'

'ಏನೋ ಸುಡುಗಾಡು.. ಮೂರು ತಂಡಗಳು ಹೋಗಿವೆಯಂತೆ ಬರ ಸ್ಟಡಿಗೆ.. ಬಿ.ಎಸ್.ವೈ. ಗ್ರೂಪು ಒಂದು ಕಡೆ. ಅದ್ರ ವಿರುದ್ಧ ಡೈರೆಕ್ಷನ್ನಲ್ಲಿ ಸದಾನಂದರ ಗ್ರೂಪು. ಸಿದ್ರಾಮಯ್ಯನವರದು ಮೂರನೇ ಗ್ರೂಪು.'

'ಸಿದ್ರಾಮಯ್ಯನವರು ಅಫಿಶಿಯಲ್ ಅಪೊಸಿಷನ್ ಲೀಡರ್. ಆದ್ರೆ ಅವರ ಕೆಲಸ ಅವರಿಗಿಂತ ಬಿ.ಎಸ್.ವೈ.ನೇ ಚೆನ್ನಾಗಿ ಮಾಡ್ತಿದಾರೇಂತ ನ್ಯೂಸ್!'

'ಹೀಗೇ ಆದ್ರೆ ಸಿದ್ದರಾಮಯ್ಯನವರ ಕೆಲಸಕ್ಕೆ ಸೋನಿಯಾ ಕೊಡ್ಲಿ ಹಾಕೋದು ಖಂಡಿತ.'

'ಡೆಲ್ಲಿಯಿಂದ ಅನಂತ ಕುಮಾರ್ ಕೂಡ ಅವರ ತಂಡದ ಜೊತೆ ಬರಾ ಸ್ಟಡಿಗೆ ಬರ್ತ್ತಾರಂತೆ! ಬರ್ತಾ ಬರ್ತಾ ಇದು 'ಬರ ದರ್ಶನ' ಅಥವಾ 'ಬರ ಪ್ರವಾಸ' ಆಗ್ತಿದೆ!'

'ಹೌದಜ್ಜಿ!'

'ಯು.ಎನ್.ಓ. ನಮ್ಮ ಪಶ್ಚಿಮ ಘಟ್ಟವನ್ನು 'ವರ್ಲ್ಡ್ ಹೆರಿಟೇಜ್ ಸೈಟ್' ಅಂತ ಘೋಷಿಸಿದ್ದಾರಂತಲ್ಲಾ ಹಾಗೆ ನಮ್ಮ 'ಬರ'ವನ್ನು ಇದೇ ರೀತಿ ಕಾಪಾಡಿ ಕೊಂಡು ಬಂದ್ರೆ ಯು.ಎನ್.ಓ. 'ಬರ ಹೆರಿಟೇಜ್ ಸೈಟ್' ಅಂತ ಘೋಷಿಸುವ ಹಾಗೆ ಯಾಕೆ ಮಾಡಬಾರದು? ಅದನ್ನು ಹಾಗೇ ನೋಡ್ಕೋಳಕ್ಕೆ ಬಹಳ ದುಡ್ಡು ಕೊಡ್ತಾರಂತಲ್ಲಾ... 'ಕಸದಲ್ಲಿ ರಸ' ಅಂತಾರಲ್ಲಾ.. ಹಾಗೆ 'ಬರ'ದಲ್ಲೂ ನಮಗೆ ದುಡ್ಡು ಬರುವ ಹಾಗೆ ಯಾಕೆ ಮಾಡಬಾರದು? ಇದೆಲ್ಲಾ 'ಬಯ್ಯೋ ಡೈವರ್ಸಿಟಿ' ಅಂತೆ....'

'ಅಜ್ಜಿ! ಬಯ್ಯೋ ಡೈವರ್ಸಿಟಿ ಅಲ್ಲ, ಬಯೋ ಡೈವರ್ಸಿಟಿ! ನಿನ್ನ ಐಡಿಯಾ ಗ್ರೇಟ್!'

'ನಮ್ಮ ಚೀಫ್ ಮಿನಿಸ್ಟರ್ ಶೆಟ್ಟರ್ರು ಸಿ.ಎಮ್. ಆದ ತಕ್ಷಣ ಎಲ್ಲಾ ಎಮ್ಮೆ.ಲೇ.ಗಳನ್ನು ಬೇರೆ ಬೇರೆ ದೇಶಗಳಿಗೆ ಸ್ಟಡಿ ಟೂರಿಗೆ ಕಳಿಸಿದ್ದಾರಲ್ಲಾ... ಒಂದಿಷ್ಟು ಮಂದಿ ಅರ್ಜೆಂಟಾಗಿ ಅರ್ಜೆಂಟೈನಾಗೆ, ಮಿಕ್ಕವರು ಅಮೇರಿಕಾಗೆ.. ಪ್ರತಿಯೊಬ್ಬರಿಗೂ 7 ಲಕ್ಷ ಕೊಟ್ಟು..'

'ಹೌದು ಅಜ್ಜಿ! ಸಿಕ್ಕಾಪಟ್ಟೆ ದುಂದು ವೆಚ್ಚ.'

'ದುಂದು ವೆಚ್ಚವಲ್ಲ ಅದು. ಅವ್ರು ಹೋಗೋ ದೇಶದಲ್ಲೆಲ್ಲಾ ನಮ್ಮ ರಾಜ್ಯದ 'ಬರ'ದ ಬಗ್ಗೆ ಡಂಗೂರ ಹೊಡೆದು ಅದನ್ನು ನೋಡಲು ಅಲ್ಲಿಯ ಎಮ್ಮೆ.ಲೇ.ಗಳು, ಜನಗಳನ್ನು ಆಮಂತ್ರಿಸಿದರೆ ಎಷ್ಟು ಚೆನ್ನಾಗಿರುತ್ತೆ! ತಂಡೋಪ ತಂಡದಲ್ಲಿ ಜನಗಳು ನಮ್ಮ ಕಡಲೇಕಾಯಿ ಪರಿಷೆಗೆ ಬರ್ತಿದ್ರಲ್ಲಾ.. ಆ ತರಹ ಬಂದ್ರೆ ನಮಗೆ ಡಾಲರ್‌ಗಳೂ ಚೆನ್ನಾಗಿ ಸಿಗುತ್ತಲ್ವೇನೋ?'

'ಅಜ್ಜಿ, ನೀನು ನಮ್ಮ 19ರ ಕ್ರಿಕೆಟ್ ಟೀಮಿನ ಕ್ಯಾಪ್ಟನ್ ಉನ್ಮುಕ್ತ್ ಚಾಂದ್ ಹಾಗೆ ಬರೀ ಸಿಕ್ಸರ್ ಹೊಡೀತಿದಿಯಾ! ಈ ಐಡಿಯಾಗಳು ನಮ್ಮ ಸಿ.ಎಮ್.ಗೆ ಕೊಟ್ಟರೆ ನಿನಗೆ ಈ ವರ್ಷ ರಾಜ್ಯೋತ್ಸವ ಅವಾರ್ಡ್ ಗ್ಯಾರಂಟಿ! ಲಾಲ್‌ಬಾಗಿನ ಗ್ಲಾಸ್ ಹೌಸ್ನಲ್ಲೋ, ಗವರ್ನರ್ ಮನೇಲೋ ನಡೆಯುವ ಫಂಕ್ಷನ್ಗೆ ನಾನೂ ನಿನ್ ಜೊತೆ ಬರ್ತೀನಿ!'

✵

## ಪ್ರಯತ್ನಿಸಿ

***ನಿಮ್ಮ ಹೆಂಡತಿಗೆ "ಐ ಲವ್ ಯು ಟೂ" ಅಂತ ಮೆಸೇಜ್ ಕಳಿಸಿ ನೋಡಿ!***

# ಆಧುನಿಕ ಭಗೀರಥ.......

- ಎಚ್. ಗೋಪಾಲಕೃಷ್ಣ

**ಸೆ**ಪ್ಟೆಂಬರ್ 15 ಸರ್ ಎಂ. ವಿಶ್ವೇಶ್ವರಯ್ಯನವರು ಹುಟ್ಟಿದ ದಿವಸ - ದೇಶ ಕಂಡ ಅತ್ಯುನ್ನತ ತಾಂತ್ರಿಕ ತಜ್ಞ - ಇಂಜಿನಿಯರ್ ಇವರು. ಕಡು ಬಡತನದಲ್ಲಿನ ಸಂಸಾರದಲ್ಲಿ ಹುಟ್ಟಿ ವಿದ್ಯಾವಂತರಾಗಿ ನಂತರ ಒಂದು ದೇಶದ ಜೀವನಶೈಲಿಯನ್ನೇ ಬದಲಾಯಿಸಿದ ಅಪರೂಪದ ವ್ಯಕ್ತಿ ಇವರು. ಸಂತನ ಹಾಗೆ ಬಾಳಿದವರು.

ರಸ್ತೆ ದೀಪದ ಬೆಳಕಿನಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು.

ವಾರಾನ್ನ ಮಾಡಿಕೊಂಡು ವ್ಯಾಸಂಗ ಮಾಡುತ್ತಿದ್ದ ಪುಟ್ಟ ಹುಡುಗ ಒಂದು ಮನೆಗೆ ಊಟಕ್ಕೆ ಹೋಗುತ್ತದೆ. ಅವತ್ತು ಯಾವುದೋ ಹಬ್ಬ, ಮನೆಯಲ್ಲಿ ಸಡಗರ ಸಂಭ್ರಮ. ಮನೆಯೊಡತಿ ಪ್ರೀತಿಯಿಂದ ಹುಡುಗನಿಗೆ ಊಟವಿಡುತ್ತಾರೆ ಮತ್ತು ಹಸಿದಿದ್ದ ಹುಡುಗ ಆತುರಾತುರವಾಗಿ ತಿನ್ನಲು ಶುರು ಮಾಡುತ್ತದೆ. ಹುಡುಗನಿಗೆ ಗಂಟಲು ಹತ್ತಿ ಬಿಕ್ಕಳಿಕೆ ಶುರುವಾಗಿ ನೀರಿಗಾಗಿ ಚಡಪಡಿಸುತ್ತದೆ. ನೀರಿಗೆ ಅಲ್ಲಿ ತೊಂದರೆ! ಹೇಗೋ ಮನೆಯೊಡತಿ ಕೊಂಚ ಹಾಲು ತಂದು ಹುಡುಗನಿಗೆ ನೀಡುತ್ತಾಳೆ, ಹುಡುಗನ ಬೆನ್ನು ಸವರಿ ಬಿಕ್ಕಲು ನಿಲ್ಲಿಸಲು ನೆರವಾಗುತ್ತಾಳೆ. ಮಗುವಿಗೆ ಹರಿಸುತ್ತಾಳೆ. ಮಗೂ ದೊಡ್ಡವನಾದ ಮೇಲೆ ಊರಿಗೆ ನೀರು ಬರುವ ಹಾಗೆ ಮಾಡು.... ಇದೇ ಹುಡುಗ ಮುಂದೆ ಬೆಳೆಯುತ್ತಾನೆ. ಬರೀ ಊರಿಗಲ್ಲಾ, ದೇಶಕ್ಕೇ ನೀರುಣಿಸುವ ಕೆಲಸ ಮಡುತ್ತಾನೆ.

ಹುಡುಗ ಬೆಳೆದ, ಬಿ.ಇ. ಪದವಿ ಗಳಿಸಿದ, ಉದ್ಯೋಗ ಅರಸಿ ಬಂದಿತು. ದೇಶದ ಅಗತ್ಯವಿರುವ ಕಡೆಗಳಲ್ಲಿ ಹೋದ, ಅಲ್ಲಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸಿದ.

ವಿಶ್ವೇಶ್ವರಯ್ಯನವರು ಮುಂಬೈನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಮೈಸೂರು ಸಂಸ್ಥಾನದ ದಿವಾನರು ಒಂದು ಪತ್ರ ಬರೆದರು. ನೀವು ಮೈಸೂರು ಸಂಸ್ಥಾನಕ್ಕೆ ಸೇರಿದವರು, ಇಲ್ಲಿ ಸೇವೆಗೆ ತಾವು ಬರಬೇಕು...

ಆದರೆ ಆ ವೇಳೆಗೆ ವಿಶ್ವೇಶ್ವರಯ್ಯನವರು ಹೈದರಾಬಾದ್ ನಿಜಾಮರ ಆಹ್ವಾನವನ್ನು ಒಪ್ಪಿ ಅಲ್ಲಿನ ಸೇವೆಗೆ ನಿಯುಕ್ತರಾಗಿದ್ದರು. ಯಾವುದಾದರೂ ದೂರದೃಷ್ಟಿಯ ಯೋಜನೆಗಳು ಇವೆಯೇ ಅಥವಾ ಸಾಮಾನ್ಯ ಇಂಜಿನಿಯರಿಂಗ್ ಕಾರ್ಯಗಳಿಗಾಗಿ ನನ್ನ ನೆರವನ್ನು ಕೇಳಲಾಗುತ್ತಿದೆಯೇ ಎಂಬ ಅರ್ಥದ ಪತ್ರ ಬರೆದು ಮೈಸೂರು ಸಂಸ್ಥಾನದ ದಿವಾನರಿಗೆ ರವಾನಿಸಿದರು. ನಂತರ ಹೈದರಾಬಾದ್‌ಗೆ ತೆರಳಿದರು. ಅಲ್ಲಿ ಮೂಸಿ ನದಿಯನ್ನು ನಿಯಂತ್ರಿಸಿದ್ದು, ಹೈದರಾಬಾದಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ಹುಸೇನ್ ಸಾಗರ್ ನಿರ್ಮಾಣವಾಗಿದ್ದು ಈಗ ಇತಿಹಾಸ. ಮೈಸೂರು ಸಂಸ್ಥಾನದ ದೂರದೃಷ್ಟಿಯ ವಿವರ ಪಡೆದ ನಂತರ ವಿಶ್ವೇಶ್ವರಯ್ಯನವರು ಇಲ್ಲಿಗೆ ಬಂದು ಅಧಿಕಾರ ವಹಿಸಿಕೊಂಡರು.

ಇವರ ಕಾಲದಲ್ಲಿಯೇ ಕನ್ನಂಬಾಡಿ ಕಟ್ಟೆ ಕೆ.ಆರ್.ಎಸ್. ನಿರ್ಮಾಣವಾಗಿ, ಇಡೀ ಪ್ರದೇಶ ಹಸಿರಿನಿಂದ ಕಂಗೊಳಿಸುವಂತೆ ಆಗಿದ್ದಲ್ಲದೇ ಈಗಲೂ ಮೈಸೂರಿನಿಂದ ಬೆಂಗಳೂರಿನವರೆಗೆ ನಾಗರಿಕರ ನೀರಿನ ಅವಶ್ಯಕತೆಗಳನ್ನು ಕಾವೇರಿ ಜೀವನದಿ ತಣಿಸುತ್ತಿದೆ. ಇವರ ದೂರದೃಷ್ಟಿಯ ಫಲದಿಂದಾಗಿ ಹಿಂದೂಸ್ತಾನ್ ಏರ್ ಕ್ರಾಫ್ಟ್ ಕಾರ್ಖಾನೆ ಜನ್ಮ ತಳೆಯಿತು, ಭದ್ರಾವತಿ ಐರನ್ ಮತ್ತು ಸ್ಟೀಲ್ ಕಾರ್ಖಾನೆ, ಸಾಬೂನು ಕಾರ್ಖಾನೆ, ಮೈಸೂರು ಬ್ಯಾಂಕು, ಶಿವನ ಸಮುದ್ರ ಮತ್ತು ಜೋಗದ ಹೈಡ್ರೋ ಎಲೆಕ್ಟ್ರಿಕ್ ಯೋಜನೆಗಳು, ಸಕ್ಕರೆ ಕಾರ್ಖಾನೆ, ಪ್ರಿಂಟಿಂಗ್ ಪ್ರೆಸ್ಸು, ಭಟ್ಕಳ ಬಂದರು, ಗಂಧದ ಎಣ್ಣೆ ತಯಾರಿಕಾ ಕಾರ್ಖಾನೆ, ಒಂದು ಪ್ರಯೋಗಶಾಲೆ, ಹೋಟೆಲ್ಲುಗ್ಗಳು, ಸಾಹಿತ್ಯ ಪರಿಷತ್ತು, ಸಾರ್ವಜನಿಕ ಗ್ರಂಥಾಲಯಗಳು, ಮೈಸೂರು ವಿಶ್ವವಿದ್ಯಾಲಯ, ಇಂಜಿನಿಯರಿಂಗ್ ಕಾಲೇಜು, ವೊಕೇಷನಲ್ ಟ್ರೈನಿಂಗ್ ಶಾಲೆ, ಸೆಂಚುರಿ ಕ್ಲಬ್ಬು, ಡೆಕ್ಕನ್ ಕ್ಲಬ್ಬು, ಕೃಷಿ ಸಂಶೋಧನಾ ಕೇಂದ್ರ, ಜಲಾಶಯಗಳು, ಪ್ರವಾಹ ನಿಯಂತ್ರಣ... ಹೀಗೆ ಹಲವು ನೂರು ಯೋಜನೆಗಳನ್ನು , ಸರ್ಕಾರೀ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳನ್ನು ಇವರು ಹುಟ್ಟು ಹಾಕಿದರು ಮತ್ತು ಮುಂದೆ ಇವುಗಳು ಸಂಪದ್ಭರಿತ ನಾಡನ್ನು ಕಟ್ಟುವಲ್ಲಿ ನೆರವಾದವು. ಬರೀ ಹುಟ್ಟೂರಿಗೆ ಮಾತ್ರವಲ್ಲದೇ ದೇಶದ ಹಾಗೂ ವಿಶ್ವದ ಎಲ್ಲೆಡೆಯಾಗಲೀ ಸೇವೆ ಬೇಕು ಎಂಬುವ ಮನವಿ ಬಂದಕೂಡಲೇ ಇವರು ನೆರವಿಗೆ ಧಾವಿಸುತ್ತಿದ್ದರು. ವಿಶ್ವೇಶ್ವರಯ್ಯನವರು ಬರೇ ಒಬ್ಬ ಇಂಜಿನಿಯರ್ ಆಗಿರಲಿಲ್ಲ, ಬದಲಿಗೆ ಒಬ್ಬ ವಿಜ್ಞಾನಿ ಅವರಲ್ಲಿದ್ದ, ಒಬ್ಬ ಆಡಳಿತಗಾರ ಅವರಲ್ಲಿದ್ದ, ಒಬ್ಬ ಮುತ್ಸದ್ದಿ ಅವರಲ್ಲಿದ್ದ – ಅವೆಲ್ಲಕ್ಕಿಂತಲೂ ಹೆಚ್ಚಾಗಿ ಅವರಲ್ಲಿದ್ದ ಮನುಷ್ಯ ಮುಂದಿನ ಹಲವಾರು ವರ್ಷಗಳಿಗೆ ಜನರಿಗೆ ಉಪಯುಕ್ತವಾಗುವಂಥಹ ಕಾರ್ಯದಲ್ಲಿ ಇವರನ್ನು ಯೋಜಿಸಿದ್ದ.

ಕನ್ನಂಬಾಡಿ ಕಟ್ಟೆ ಕಟ್ಟಬೇಕಾದರೆ ಬಂದ ಅಡೆ ತಡೆಗಳನ್ನು ಇವರು ನಿವಾರಿಸಿದ್ದು ಒಂದು ದಂತಕಥೆ. ಕಾವೇರಿ ನದಿಗೆ ಅಣೆಕಟ್ಟು ಕಟ್ಟಲು ಯೋಜನೆ ರೂಪಿತವಾದಾಗ ಅದಕ್ಕೆ ಪ್ರಬಲವಾದ ವಿರೋಧ ಕಂಡಿತು. ನೀರು ಹರಿದು ಅದರ ಪ್ರಯೋಜನವನ್ನು ಪಡೆಯುತ್ತಿದ್ದವರು ಆಗಿನ ತಮ್ಮ ಪ್ರಾಬಲ್ಯ ಬಳಸಿಕೊಂಡು ತಡೆ ಒಡ್ಡಿದರು. ವಿಶ್ವೇಶ್ವರಯ್ಯನವರು ಯೂರೋಪಿನಲ್ಲಿ ಒಂದು ನದಿಯ ನೀರನ್ನು ಹತ್ತು ರಾಷ್ಟ್ರಗಳು ಹಂಚಿಕೊಂಡು ಉಪಯೋಗಿಸುತ್ತಿರುವ ಉದಾಹರಣೆಯನ್ನು ಇಟ್ಟುಕೊಂಡು ಅಣೆಕಟ್ಟು ಯಾಕೆ ಬೇಕೇ ಬೇಕು ಎಂದು ಪ್ರತಿಪಾದಿಸಿದರು. ಅಣೆಕಟ್ಟು ನಿರ್ಮಿಸಲು ಅನುಮತಿಯನ್ನೂ ಪಡೆದರು. ಅಣೆಕಟ್ಟು ನಿರ್ಮಾಣಕ್ಕೆ ಬೇಕಾದಷ್ಟು ಹಣ ಆಗ ಆಗಿನ ಮಹಾರಾಜರಲ್ಲಿ ಇರಲಿಲ್ಲವಂತೆ. ಮಹಾರಾಜರು ಗೋಣೀಚೀಲಗಳಲ್ಲಿ ಅವರ ಖಜಾನೆಯಲ್ಲಿನ ಚಿನ್ನದ ಆಭರಣಗಳನ್ನು ತುಂಬಿಕೊಂಡು ಮುಂಬೈಗೆ ಹೋಗಿ ಅಲ್ಲಿ ಅದನ್ನು ಮಾರಿ ಹಣ ತಂದು ಕಾಮಗಾರಿಗೆ ನೆರವಾದರಂತೆ.. ನಮ್ಮ ದೇಶದಲ್ಲಿ ನಿಗದಿತ ಗಡುವಿಗೆ ಮೊದಲೇ ನಿರ್ಮಾಣಗೊಂಡ ಮೊದಲ ಹಾಗೂ ಕಡೆಯ ಅಣೆಕಟ್ಟು ಕೆ.ಆರ್.ಎಸ್.! ಆಗ ಅದು ಭಾರತದ ಅತಿ ದೊಡ್ಡ ಅಣೆಕಟ್ಟು ಎಂದು ಹೆಸರು ಮಾಡಿತ್ತು. ಇದಕ್ಕೆ ಸ್ವಯಂಚಾಲಿತ ಕ್ರೆಸ್ಟ್ ಗೇಟುಗಳನ್ನು ಪ್ರಪಂಚದಲ್ಲಿಯೇ ಮೊದಲಬಾರಿಗೆ ಅಳವಡಿಸಲಾಯಿತು. ಹೊರದೇಶಗಳಿಂದ

ಸಿಮೆಂಟು ಆಮದು ಮಾಡಿಕೊಳ್ಳುವ ಬದಲಿಗೆ ಸ್ಥಳೀಯವಾಗಿದ್ದ ಗಾರೆಯನ್ನು ಬಳಸಿ ಅಣೆಕಟ್ಟು ನಿರ್ಮಿತವಾಯಿತು.

ವಿಶ್ವೇಶ್ವರಯ್ಯನವರ ಕುರಿತು ಹಲವಾರು ಕಥೆಗಳು ಪ್ರಚಲಿತವಾಗಿವೆ. ಅದರಲ್ಲಿ ಒಂದು – ಅವರ ಜೇಬಿನಲ್ಲಿ ಯಾವಾಗಲೂ ಎರಡು ಮೇಣದ ಬತ್ತಿಗಳು ಇರುತ್ತಿತ್ತು. ಸರ್ಕಾರೀ ಕೆಲಸ ಮಾಡಬೇಕಾದರೆ ಸರ್ಕಾರದ ದುಡ್ಡಿನಲ್ಲಿ ಖರೀದಿಸಿದ ಬತ್ತಿ ಉಪಯೋಗಿಸುತ್ತಿದ್ದರು. ಇವರ ಸ್ವಂತದ ಕೆಲಸ ಮಾಡಿಕೊಳ್ಳಬೇಕಾದರೆ ಇವರ ದುಡ್ಡಿನಲ್ಲಿ ಕೊಂಡ ಬತ್ತಿ ಉಪಯೋಗಿಸುತ್ತಿದ್ದರು. ಸರ್ಕಾರವೇ ನನ್ನದು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂದು ನಂಬಿರುವ ರಾಜಕಾರಣಿಗಳ ಜತೆಗೆ ಬಾಳುವೆ ಸಾಗಿಸುತ್ತಿರುವ ಈ ಕಾಲದ ನಮಗೆ ವಿಶ್ವೇಶ್ವರಯ್ಯನವರ ನಡಾವಳಿ ಕೊಂಚ ಹೆಚ್ಚಾಯಿತು ಅನಿಸಬಹುದೇನೋ! ಆದರೆ ಆ ಕಾಲದ ಸಜ್ಜನರು ಬದುಕಿದ್ದು ಹಾಗೆ....!


ಮತ್ತೊಂದು ನೆನಪು – ನನ್ನ ಸ್ನೇಹಿತರೊಬ್ಬರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಛೇಂಬರಿನಲ್ಲಿ ವಿಶ್ವೇಶ್ವರಯ್ಯನವರ ಒಂದು ಭಾವಚಿತ್ರ ಹಾಕಿದ್ದರು. ವಾರಕ್ಕೋ ಅಥವಾ ತಿಂಗಳಿಗೋ ಒಮ್ಮೆ ಅದಕ್ಕೆ ಹಾರ ಬದಲಾಯಿಸುವುದು ಮತ್ತು ಧೂಳು ಹೊಡೆಯುವ ಕೆಲಸವನ್ನು ಒಬ್ಬರು ದಿನಗೂಲಿ ನೌಕರರು – ತಮಿಳು ಹೆಂಗಸು ಮಾಡುತ್ತಿದ್ದರು. ಒಂದು ಸಲ ಧೂಳು ಹೊಡೆದು ಫೋಟೋ ಒರೆಸಿ ಅದಕ್ಕೆ ಹಾರ ಬದಲಾಯಿಸಿ ನನ್ನ ಗೆಳೆಯರನ್ನ ಆಕೆ ಹೀಗೆ ಕೇಳಿದರಂತೆ – ಅಂದ ತಾತಾ ಯಾರು ಉಂಗಳ ರಿಲೇಷನ್ನಾ?.....

ಈ ನೆನಪುಗಳು ಯಾಕೆ ಬಂದುವು ಅಂತೀರಾ? ಇಷ್ಟೊಂದು ಕೆಲಸ ಮಾಡಿದ್ದ ವಿಶ್ವೇಶ್ವರಯ್ಯನವರ ಪರಿಚಯ ನಮಗೆ ಸರಿಯಾಗಿ ಇಲ್ಲ ಅನ್ನುವುದು ಒಂದು ಕಾರಣ, ಮತ್ತೊಂದು ಅವರ ಹೆಸರಿನ ಯಾವುದೇ ದೊಡ್ಡ ಸ್ಮಾರಕ ಇತ್ಯಾದಿಗಳನ್ನು ಯಾರೂ ಯಾಕೆ ಚಿಂತಿಸಲೇಇಲ್ಲ ಎನ್ನುವುದು...

ಸರ್ಕಾರದ ಖರ್ಚಿನಲ್ಲಿ ಕಟ್ಟಿದ ಒಂದು ಬಸ್ ಸ್ಟಾಪು, ಒಂದು ಕುಡಿಯುವ ನೀರಿನ ತೊಟ್ಟಿ, ದೇವಸ್ಥಾನಕ್ಕೆ ನೀಡಿದ ಒಂದು ಟ್ಯೂಬ್‌ಲೈಟು, ಒಂದು ಫ್ಯಾನು.... ಇವುಗಳ ಮೇಲೆಲ್ಲಾ ಹೆಸರು, ಕುಲ, ಗೋತ್ರಗಳನ್ನು ಬರೆಸಿಕೊಳ್ಳುವ ಜನರು ಇದ್ದ ಕಾಲದಲ್ಲಿಯೇ ಇವರೂ ಜೀವಂತವಾಗಿದ್ದವರು – ಇವರಿಗೆ ಯಾಕೆ ಇಂಥಹ ಆಸೆಗಳು ಹುಟ್ಟಲಿಲ್ಲ?

ಮೈಸೂರು ವಿಶ್ವವಿದ್ಯಾಲಯ ಅದರ ಶತಮಾನೋತ್ಸವ ಸಂದರ್ಭದಲ್ಲಿ – 2016ರ ಹೊತ್ತಿಗೆ ವಿಶ್ವೇಶ್ವರಯ್ಯನವರ ಹಾಗೂ ಮೈಸೂರಿನ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಯನ್ನು ಸ್ಥಾಪಿಸಲು ನಿರ್ಧಾರ ತೆಗೆದುಕೊಂಡಿದೆ. ಅಂತೂ ಒಬ್ಬ ಸಜ್ಜನರನ್ನು ಹಿರಿಯರನ್ನು ಹಾಗೂ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ ಮಹಾ ವ್ಯಕ್ತಿಗಳನ್ನು ನೆನೆಸಿಕೊಳ್ಳುತ್ತಿದ್ದೇವೆ ಎನ್ನುವ ಸಮಾಧಾನ.... ಒಂದು ಅರ್ಥದಲ್ಲಿ ಆಧುನಿಕ ಭಗೀರಥರುಗಳು ಇವರು.

*(ಆಧಾರ: ಶ್ರೀ ಪ್ರತಾಪಸಿಂಹ, ಡಿ.ವಿ.ಜಿ., ಮಾಸ್ತಿ ಅವರ ಲೇಖನಗಳು)*




Since 1998

**Whisper Hearing Aids**

Pvt. Ltd.

1030/13, 25 main, 39 cross,
4th 'T' block, Jayanagara, Bengaluru

**SIEMENS**

Authorised Hearing Care Centre

Avail **FREE** supply of batteries for a year on purchase of hearing aids for this week.

10am - 1:30pm, 5pm - 8pm

Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಗೋವಿಂದಾಯ ನಮಃ

**- ಅನಿತಾ ನರೇಶ್ ಮಂಚಿ**

**ಮ**ಧ್ಯಾಹ್ನ ಊಟ ಮಾಡಿ, ಚಿಲ್ಲರೆ ಕೆಲಸಗಳನ್ನು ಮುಗಿಸಿ ಹೊರಬಂದು ಪೇಪರ್ ಹರಡಿಕೊಂಡು ಒಂದಾದ್ರು ಒಳ್ಳೆ ಸುದ್ದಿ ಇದೆಯ ಅಂತ ಹುಡುಕುತ್ತಾ ಕುಳಿತಿದ್ದೆ. ತೋಟದ ಕಡೆಯಿಂದ 'ಕಿರ್ರೀಂ...' ಎಂಬ ಶಬ್ದ ಕೇಳಿಸತೊಡಗಿತು. ಯಾವುದೋ ಹಕ್ಕಿ ಇರಬಹುದೆಂದು ಸುಮ್ಮನಾದರೆ, ಆ ಸ್ವರ ದೀರ್ಘವಾಗಿ ಆರ್ತನಾದದಂತೆ ಜೋರಾಗತೊಡಗಿತು. ಹಗಲು ಹೊತ್ತಾದ ಕಾರಣ ಭೂತ ಚೇಷ್ಟೆ ಇರಲಾರದು ಎಂದು ಧೈರ್ಯ ಮಾಡಿಕೊಂಡು, ಧ್ವನಿ ಮೂಲ ಹುಡುಕುತ್ತಾ ಇಣುಕಿದರೆ ಗಾಳಿಗೆ ತಲೆ ತುಂಡಾಗಿ ನೆಟ್ಟಗೆ ನಿಂತಿದ್ದ ಅಡಿಕೆ ಮರವೊಂದು ಮನೆಯಕಡೆ ವಾಲುತ್ತಿತ್ತು. ಇದೊಳ್ಳೆ ಗ್ರಹಚಾರ ಬಂತಲ್ಲಪ್ಪಾ ಎಂದುಕೊಂಡು ಎಲ್ಲರನ್ನೂ ಕರೆದು ತೋರಿಸಿದೆ. ನಮ್ಮನ್ನೆಲ್ಲಾ ನೋಡಿ ನಾಚಿಕೆಯಾಯಿತೇನೋ... ಮರ ಇನ್ನೊಂದಿಷ್ಟು ಬಾಗಿ, ಇವತ್ತಿಗೆ ಇಷ್ಟು ಸಾಕು ಎಂಬಂತೆ ತಟಸ್ಥವಾಯಿತು.

ಈಗ ಪೀಸಾದ ವಾಲುಗೋಪುರದಂತೆ ನಿಂತಿದ್ದ ಮರ ಮನೆಯ ಮಾಡಿನ ಮೇಲೇನಾದರು ಬಿದ್ದರೆ ಹಂಚುಗಳು ಪೀಸು ಪೀಸಾಗುವುದರಲ್ಲಿ ಸಂಶಯವೇ ಇರಲಿಲ್ಲ. ಮನೆಯ ಒಳಗೆ ನಿಶ್ಚಿಂತರಾಗಿ ಕುಳಿತುಕೊಳ್ಳಲೂ ಭಯವಾಗಿ ಇನ್ನೇನು ಮಾಡುವುದಪ್ಪಾ ಎಂದು ಎಲ್ಲರೂ ತಲೆಕೆಡಿಸಿಕೊಳ್ಳತೊಡಗಿದೆವು. ಅದನ್ನು ಕಡಿಸಿ ಬಿಡುವುದು ಬಿಟ್ಟರೆ ಬೇರೆ ಪರಿಹಾರ ಯಾರಿಗೂ ಹೊಳೆಯಲಿಲ್ಲ. ಹಾಗಾಗಿ ಮರ ಕಡಿಯುವುದರಲ್ಲಿ ನಿಸ್ಸೀಮನಾಗಿದ್ದ ನಮ್ಮೂರಿನ ಗೋವಿಂದನ ನಾಮ ಸ್ಮರಣೆ ಮಾಡದೆ ವಿಧಿಯಿರಲಿಲ್ಲ. ಹೇಗೋ ಅವನ ಮೊಬೈಲ್ ನಂಬರನ್ನು ಪತ್ತೆ ಮಾಡಿ ಫೋನಾಯಿಸಿದೆವು.

**ಕೈಯ್ಯಲ್ಲಿ ಕೊಡಲಿಯನ್ನು ಹೆಗಲಿಗೇರಿಸಿ ಆಧುನಿಕ ಪರಶುರಾಮನಂತೆ ನಿಂತಿದ್ದ ಗೋವಿಂದ ಕೊನೆಗೆ ಮಾಡಿದ್ದಾದರೂ ಏನು?**

ಮೂರ್ನಾಲ್ಕು ಬಾರಿ ಪೂರ್ತಿ ಹೊಡೆದುಕೊಂಡ ಬಳಿಕ ಫೋನ್ ಎತ್ತಿದ ಗೋವಿಂದ, 'ನಾನೀಗ ಒಂದು ಮರದ ತುದಿಯಲ್ಲಿದ್ದೇನೆ, ನಾಳೆ ಬೆಳಿಗ್ಗೆ ನಿಮ್ಮ ಅಂಗಳದಲ್ಲಿ ಪ್ರತ್ಯಕ್ಷನಾಗುತ್ತೇನೆ' ಎಂದು ಅಭಯ ಪ್ರಧಾನ ಮಾಡಿದ. ಆದರೆ ರಾತ್ರಿಯೊಂದು ಕಳೆಯಬೇಕಿತ್ತಲ್ಲ, ಅದು ಹೇಗೆ ಎಂಬುದೇ ನಮ್ಮ ಚಿಂತೆ. ಅದನ್ನು ಅವನಿಗೇ ಅರುಹಿದಾಗ, ಮರದ ಬಾಗುವಿಕೆಯ ತೀವ್ರತೆ, ಅದರ ಉದ್ದ, ಅಗಲ ಎಲ್ಲವನ್ನೂ ವಿಚಾರಿಸಿ, ನಾಳೆಯವರೆಗೆ ಏನೂ ತೊಂದರೆಯಾಗದು, ಭಯ ಬೇಡ ಎಂದು ದೂರದಿಂದಲೇ ಭವಿಷ್ಯ ನುಡಿದ.

'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ' ಎಂದು ಎಲ್ಲಾ ಭಾರವನ್ನು ಅವನ ಮೇಲೆ ಹಾಕಿ ರಾತ್ರಿಯನ್ನು ಅರೆ ನಿದ್ರೆ, ಅರೆ ಜಾಗೃತಾವಸ್ಥೆಯಲ್ಲಿ ಕಳೆದೆವು. ನಾವು ನಿದ್ದೆ ಮಾಡದಿದ್ದರೇನಂತೆ... ಬೆಳಗಾಗುವುದು ನಿಲ್ಲುತ್ತದೆಯೇ....?

ಗಂಟೆ ಒಂಭತ್ತಾದರೂ ಬೇಗ ಬರುತ್ತೇನೆಂದು ವಚನವಿತ್ತಿದ್ದ ಗೋವಿಂದ ನಾಪತ್ತೆ. ಒಮ್ಮೆ ವಾಲಿದ ಮರದ ಕಡೆಗೆ ಇನ್ನೊಮ್ಮೆ ಅಂಗಳದ ಕಡೆಗೆ ನೋಡುತ್ತಾ ಅತ್ತಿಂದಿತ್ತ ಸುಳಿದಾಡತೊಡಗಿದೆವು. ಆಗೀಗ ಹೊರಗಿನವರೆಗೆ ಕೇಳಿಸದಂತೆ ತಗ್ಗಿದ ಧ್ವನಿಯಲ್ಲಿ ಅವನನ್ನು ಬಯ್ಯುದ್ದೊಂಡೆವು. ಗಡಿಯಾರದ ಮುಳ್ಳು ಹತ್ತನ್ನು ಸಮೀಪಿಸುತ್ತಿದ್ದಂತೆ ಸೈಕಲ್ ಬೆಲ್ ಕೇಳಿಸುವುದಕ್ಕೂ ಮತ್ತು ನನ್ನ ಅಣ್ಣನ ಮಗಳು 'ಮರ ಕಡಿಯುವವರು ಬಂದ್ರೂ' ಅಂತ ಕಿರುಚಿಕೊಂಡು ಒಳ ಬರುವುದಕ್ಕೂ ಸರಿ ಹೋಯಿತು. ಅರೆ ನಂಬಿಕೆಯಲ್ಲಿ ಹೊರಗಿಣುಕಿದರೆ, ಒಂದು ಕೈಯ್ಯಲ್ಲಿ ಸೈಕಲ್ಲನ್ನು ಸಂಭಾಳಿಸಿಕೊಂಡು, ಇನ್ನೊಂದು ಕೈಯ್ಯಲ್ಲಿ ಕೊಡಲಿಯನ್ನು ಹೆಗಲಿಗೇರಿಸಿ ಆಧುನಿಕ ಪರಶುರಾಮನಂತೆ ನಿಂತಿದ್ದ ಗೋವಿಂದ ಕಾಣಿಸಿದ.

ಅಸಹನೆ ತುಂಬಿ ತುಳುಕುತ್ತಿದ್ದ ನಮ್ಮ ಮುಖಗಳನ್ನು ನೋಡಿ ಹೆಚ್ಚು ಮಾತು ಬೆಳೆಸದೇ ಬಾಗಿ ನಿಂತಿದ್ದ ಮರವನ್ನೊಮ್ಮೆ ಬಗ್ಗಿ ತಲೆಯೆತ್ತಿ ನೋಡಿ 'ಹೌದಾ.. ಇದು ನಿನ್ನೆ ರಾತ್ರಿ ಬೀಳದೇ ಉಳಿದದ್ದು ನಿಮ್ಮ ಪುಣ್ಯ ಮಾರಾಯ್ರೆ.. ನೀವು ಫೋನಲ್ಲಿ ಹೇಳಿದಾಗ ಇಷ್ಟು ಬಗ್ಗಿದೆ ಅಂತ ಅಂದಾಜಿರಲಿಲ್ಲ' ಎಂದು ನಮ್ಮ ಬೆನ್ನು ಹುರಿಯಲ್ಲಿ ನಡುಕವೆಬ್ಬಿಸಿದ. 'ಆದ್ರೆ ಇನ್ನು ಬಿಡಿ, ನಾನು ಬಂದಾಯ್ತಲ್ಲ.. ಇದೇನು ಮಹಾ.. ನನ್ನ ಸರ್ವೀಸಿನಲ್ಲಿ ಇದರ ಅಪ್ಪನಂತಹ ಮರಗಳನ್ನು ಕಡಿದುರುಳಿಸಿದ್ದೇನೆ' ಎಂದು ಎದೆ ತಟ್ಟಿಕೊಂಡು ನಮ್ಮ ಬಣ್ಣವಿಳಿದ ಮೋರೆಗಳನ್ನು ಕೊಂಚ ಗೆಲುವಾಗಿಸಿದ.

ಮುಂದೇನು ಎಂಬಂತೆ ನಾವು ಕಣ್ಣು ಮಿಟುಕಿಸುತ್ತಿರ ಬೇಕಾದರೆ, ''ಹೌದಾ.. ಇಲ್ಲಿ ನೋಡಿ.. ಈಗಿದ್ದ ಹಾಗೆಯೇ ಕಡಿದರೆ ಮರ ಸೀದಾ ಮನೆಯಮೇಲೆ ಬೀಳುತ್ತದೆ. ನಿಮ್ಮಲ್ಲಿ ಬಳ್ಳಿ ಏನಾದ್ರು ಇದೆಯ..'' ಎಂದು ನಮ್ಮಲ್ಲಿಲ್ಲದ ಹಗ್ಗಕ್ಕೆ ಅವನ ಡಿಮ್ಯಾಂಡ್..

ಅದನ್ನು ಕೇಳಿದ ನನ್ನ ಅಣ್ಣನ ನಾಲ್ಕು ವರ್ಷದ ಮಗಳು ಪುಟ್ಟಿ ಕೂಡಲೇ ಜಿಗಿಯುತ್ತಾ ಮನೆಯೊಳಗೆ ಓಡಿದಳು. ಅತ್ತೆಯವರು ಮಲ್ಲಿಗೆ ಮಾಲೆ ಕಟ್ಟಲು ಸಂಗ್ರಹಿಸಿ ಇಟ್ಟಿದ್ದ ಬಾಳೆ ನಾರುಗಳಿರುವ ಸ್ಥಳ ಅವಳಿಗೆ ಮೊದಲೇ ಗೊತ್ತಿತ್ತೋ ಏನೋ! ಓಡಿ ಬಂದು ಅದನ್ನು ಗೋವಿಂದನ ಕೈಯಲ್ಲಿಟ್ಟಳು. ಗೋವಿಂದ ಅದನ್ನು ನೋಡಿ, ಯಕ್ಷಗಾನದ ರಕ್ಕಸನಂತೆ ಅಲೆ ಅಲೆಯಾಗಿ ನಕ್ಕು 'ಎಂತ ಪುಟುಗೋಸಿ ಬಳ್ಳಿ ಪುಟ್ಟಮ್ಮಾ ಇದು! ಇದ್ರಲ್ಲಿ ಬೆಕ್ಕಿನ ಮರಿಯನ್ನು ಕಟ್ಲಿಕ್ಕೂ ಆಗ್ಲೀಕಿಲ್ಲ' ಅನ್ನುತ್ತಾ ಪಕ್ಕಕ್ಕೆಸೆದ. ಇವನ ನಗುವಿನ ಅಬ್ಬರಕ್ಕೆ ಮರ ಇನ್ನಷ್ಟು ವಾಲಿತೋ ಎಂದು ಅನುಮಾನದಿಂದ ನಾನೊಮ್ಮೆ ಮರದೆಡೆಗೆ ನೋಡಿದೆ.

ಸರಿಯಾದ ಸಲಕರಣೆಗಳಿಲ್ಲದೇ ಕೆಲಸ ಸಾಗುವುದು ಹೇಗೆ! ಬೇರೆ ಮಾರ್ಗವಿಲ್ಲದೇ ನನ್ನ ಮಗ ಬೈಕ್ ಸ್ಟಾರ್ಟ್ ಮಾಡಿ, ಬೇಡ ಎಂದರೂ ಕೇಳದೇ, ನಾನೂ ಬರುತ್ತೇನೆಂದು ಹಠ ಮಾಡುತ್ತಿದ್ದ ಪುಟ್ಟಿಯನ್ನೇರಿಸಿಕೊಂಡು ಹಗ್ಗ ತರಲು ಪೇಟೆಗೆ ಹೋದ. ಅವರು ಬರುವವರೆಗೆ ವಿರಾಮವೆಂಬಂತೆ ಗೋವಿಂದ ಅಲ್ಲೇ ಕಲ್ಲಿನ ಮೇಲೆ ಅಂಡೂರಿದ. ಅಲ್ಲಿಗೇ ಅವನಿಗೆ ಕಾಫಿ ತಿಂಡಿಯ ವ್ಯವಸ್ಥೆಯೂ ಆಯಿತು. ಪೇಟೆಯಿಂದ ಹಗ್ಗ ಬರುವುದರ ಒಳಗೆ ಸಾವಕಾಶವಾಗಿ ತಿಂಡಿ ತಿಂದು ಮುಗಿಸಿ, ಸೊಂಟದಿಂದ ಎಲೆ ಅಡಿಕೆ ಸಂಚಿಯನ್ನು ತೆಗೆದು ನಿರ್ವಿಕಾರ

ಚಿತ್ತದಿಂದ ಒಮ್ಮೆ ಒಳಗೆ ಕಣ್ಣಾಡಿಸಿ ಮತ್ತೆ ಸೊಂಟದಲ್ಲಿಟ್ಟುಕೊಂಡ. ಅರೆ! ಎಲೆ ಅಡಿಕೆ ಬೇಡವೆ! ದೇವರ ತಲೆಯಲ್ಲಿ ಹೂವು ತಪ್ಪಿದರೂ ಇವನ ಬಾಯಲ್ಲಿ ಎಲೆ ತಪ್ಪಿದ್ದಲ್ಲ. ಇಂದೇನು ವಿಚಿತ್ರ ಅಂತ ನಾವಂದುಕೊಳ್ಳುತ್ತಿರುವಾಗ ಎದ್ದು ವಾಲಿದ ಮರದ ಕಡೆಗೆ ಕತ್ತಿ ಹಿಡಿದು ರಭಸದಿಂದ ನಡೆದೇ ಬಿಟ್ಟ.

ಪರಿಸ್ಥಿತಿಯ ಗಂಭೀರತೆ ಅವನಿಗೂ ಅರಿವಾಗಿರಬೇಕು. ಎಲೆ ಅಡಿಕೆ ತಿನ್ನುತ್ತಾ ಸಮಯ ಪೋಲು ಮಾಡಬಾರದು ಅಂತ ಅಂದು ಕೊಂಡಿರ ಬೇಕು. ಸರಿ.. ಅವನು ಮರ ಕಡಿಯುವ ಶೈಲಿಯನ್ನು ನೋಡುವ ಕುತೂಹಲದಿಂದ ನಾವೆಲ್ಲಾ ಅವನ ಬೆನ್ನಿನ ಹಿಂದೆಯೇ ನಡೆದೆವು. ಅವನು ಸಾವಕಾಶವಾಗಿ ಕೆಳಗೆ ಬಿದ್ದಿದ್ದ ಅಡಿಕೆಯೊಂದನ್ನು ಕೈಯಲ್ಲೆತ್ತಿಕೊಂಡು ಕತ್ತಿಯಲ್ಲಿ ಸಿಪ್ಪೆ ತೆಗೆದು ಸಣ್ಣ ಹೋಳುಗಳನ್ನಾಗಿ ಮಾಡಿ ಒಂದೆರಡು ಹೋಳುಗಳನ್ನು ಬಾಯಿಗೆಸೆದುಕೊಂಡು ಉಳಿದದ್ದನ್ನು ಸಂಚಿಗೆ ಸೇರಿಸಿದ. ಅದರ ಅಳತೆಗೆ ತಕ್ಕಷ್ಟು ವೀಳ್ಯದ ಎಲೆ, ಸುಣ್ಣ ಹೊಗೆಸೊಪ್ಪುಗಳೂ ಬಾಯಿಗೆ ಸೇರಿದವು.

ಈಗ ಇವನ ಧಾವಂತದ ನಡಿಗೆಯ ಕಾರಣ ಗೊತ್ತಾಗಿ ತಲೆ ಚಚ್ಚಿಕೊಂಡೆವು. ಆದರೀಗ ಹಸಿ ಅಡಕೆಯೊಂದಿಗೆ ಹೊಗೆಸೊಪ್ಪು ಸೇರಿ ಚುರುಕು ಮುಟ್ಟಿಸಿತೋ ಏನೋ.., ತಾಂಬೂಲದ ರಸ ತುಂಬಿದ್ದ ಬಾಯಿಯನ್ನು ಸೊಟ್ಟಗೆ ಮಾಡಿಕೊಂಡು ವಿಚಿತ್ರ ಸ್ವರ ಹೊರಡಿಸುತ್ತಾ ಮರವನ್ನು ಯಾವ ಮಟ್ಟದಿಂದ ಕಡಿದರೆ ಯಾವ ಕಡೆ ಉರುಳುತ್ತದೆ ಇತ್ಯಾದಿ ವಿಷಯಗಳನ್ನು ವಿವರಿಸತೊಡಗಿದ. ಅಲ್ಲಿಂದ ಮುಂದುವರಿದ ಅವನ ಮಾತು ಕಡಿಯಲ್ಪಡುವ ಮರ ಮೊದಲು ಎಷ್ಟು ಫಸಲು ಕೊಡುತ್ತಿತ್ತು ಎಂದು ಅರಿಯುವ ದಿಕ್ಕಿನೆಡೆಗೆ ಹರಿದಿತ್ತು.

ಒಮ್ಮೆ ಯಾವುದೇ ಅಪಾಯವಿಲ್ಲದೇ ಮರ ನೆಲಕ್ಕುರುಳಿದರೆ ಸಾಕು ಎಂದು ಕಾಯುತ್ತಿದ್ದ ನಮಗೆ ಇವನ ಮಾತುಗಳಿಂದ ಪಿತ್ತ ನೆತ್ತಿಗೇರ ತೊಡಗಿತು. ಬಂದ ಕೆಲಸ ಮೊದಲು ಶುರು ಮಾಡು ಮಾರಾಯ ಅಂತ ಅವನಿಗೆ ತುಸು ಖಾರವಾಗಿ ಸೂಚಿಸಿದೆವು. ಗೋವಿಂದ ಬಾಯಲ್ಲಿದ್ದ ತಾಂಬೂಲವನ್ನು ಪಿಚಕ್ಕನೆ ಪಕ್ಕಕ್ಕುಗಿದು, ಕಣ್ಣು ಮುಚ್ಚಿ ಬಿಡುವುದರ ಒಳಗೆ ಕಡಿದುರುಳಿಸಿ ಬಿಡ್ತೇನೆ ನೋಡಿ ಅನ್ನುತ್ತಾ ಬಾಗಿದ ಮರಕ್ಕೆ ಹಗ್ಗದ ಕುಣಿಕೆ ಮಾಡಿ ಕಟ್ಟಲೋಸುಗ ಅದರ ಬಳಿಯೇ ಇದ್ದ ಇನ್ನೊಂದು ಮರವನ್ನು ಸರ ಸರನೆ ಏರಿದ.

ಹ್ವಾಯ್.. ಇದ್ಯಾವಾಗ ಇಷ್ಟು ಬಗ್ಗಿದ್ದು ಮಾರಾಯ್ರೇ!! ಎಂದು ನಮ್ಮ ಬೆನ್ನ ಹಿಂದಿನಿಂದ ಕೇಳಿ ಬಂದ ಉದ್ಗಾರ ಪಕ್ಕದ ಮನೆಯ ಕಿಟ್ಟು ಮಾವನದ್ದೇ ಎಂದು ತಿಳಿಯಲು ನಮಗೆ ತಿರುಗಿ ನೋಡ ಬೇಕಾಗಿರಲಿಲ್ಲ. ಅವರನ್ನು ನೋಡಿದ ಗೋವಿಂದ, ಮರದ ತುದಿಯಿಂದಲೇ 'ನಮಸ್ಕಾರ ಧನೀ.. ನಾನು ಇಲ್ಲಿದ್ದೇನೆ' ಎಂದ. 'ಇಂತದ್ದಕ್ಕೆಲ್ಲಾ ನೀನೇ ಆಗ ಬೇಕಷ್ಟೆ ಗೋವಿಂದಾ.. ಅಲ್ಲ ನೀನು ಅಷ್ಟು ಬೇಗ ಮರ ಹತ್ತಿಯೂ ಆಯ್ತಾ ಮಾರಾಯ. ಆ ಮರ ಹತ್ತುವ ಬದಲು ಇದಾ ಈ ಕಡೆ ಇರೋ ಮರ ಹತ್ತಿದ್ರೆ ಕೆಲಸ ಸುಲಭ ಆಗ್ತಿತ್ತಲ್ವೋ..' ಅನ್ನುತ್ತಾ ಕಿಟ್ಟು ಮಾವ ಸನ್ನಿವೇಶವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳತೊಡಗಿದರು.

ಗೋವಿಂದ ಏರಿದ ವೇಗದಲ್ಲೇ ಕೆಳಗಿಳಿದ. ತಮ್ಮ ಮಾತಿಗೆ ಬೆಲೆ ಕೊಟ್ಟು ಇಳಿದ ಅಂದುಕೊಂಡು ಕಿಟ್ಟುಮಾವ ನಮ್ಮೆಡೆಗೆ ಹೆಮ್ಮೆಯ ದೃಷ್ಟಿ ಬೀರಿದರೆ, ಗೋವಿಂದ ಭೂತ

ಹಿಡಿದವರಂತೆ ಮೈ ಕೈ ಕೊಡವಿ ಕುಣಿಯತೊಡಗಿದ. ಮರ ಹತ್ತುವಾಗ ಸರಿ ಇದ್ದ, ಈಗೇನಾಯ್ತಪ್ಪಾ ಇವನಿಗೆ ಎಂದು ನಾವು ಗಾಭರಿಯಾದೆವು. ಮರದ ತುದಿಯಲ್ಲಿ ಬೀಡು ಬಿಟ್ಟಿದ್ದ ಕೆಂಜಿರುವೆಗಳು ಅವನ ಮೇಲೆ ದಾಳಿ ಮಾಡಿದ್ದವು. ಯಾರಿದ್ದಾರೆ ಯಾರಿಲ್ಲ ಎಂಬುದನ್ನು ಲೆಕ್ಕಿಸದೇ ಬಾಯಿಗೆ ಬಂದ ಹಾಗೆ ಇರುವೆಗಳ ಸಂತತಿಯನ್ನು ವಾಚಾಮಗೋಚರವಾಗಿ ನಿಂದಿಸುತ್ತಾ ನನ್ನೆಡೆಗೆ ನೋಡಿ 'ಅಕ್ಕಾ ಆ ಇರುವೆ ಪೌಡರ್ ಇದ್ರೆ ಸ್ವಲ್ಪ ಕೊಡಿ.... ಬೇಗ' ಎಂದ. ಅವನಂದದ್ದನ್ನು ಕೇಳಿದ ನನ್ನಣ್ಣನ ಮಗಳು 'ಇರುವೆನೂ ಪೌಡರ್ ಹಾಕುತ್ತಾ ಅತ್ತೇ..? ಕ್ರೀಮ್ ಕೂಡಾ ಇದ್ಯಾ? ಎಲ್ಲಿದೆ ತೋರ್ಸಿ..' ಅಂತ ನನ್ನ ಹಿಂದೆಯೇ ಬಂದಳು. ಮುಚ್ಚಳ ತೆರೆಯುವ ಮೊದಲೇ ಘಾಟು ಹೊಡೆಯುವ ಕೀಟನಾಶಕ ಪೌಡರನ್ನು ನೋಡಿ 'ಥೂ' ಎಂದು ಮುಖ ಸಿಂಡರಿಸಿಕೊಂಡಳು. ಅವಳನ್ನು ನೋಡಿ ಅನಾಯಾಸವಾಗಿ ಬಂದ ನಗುವನ್ನು ಹತ್ತಿಕ್ಕಿಕೊಳ್ಳುತ್ತಾ ಗೋವಿಂದನಿಗೆ ಪೌಡರ್ ಡಬ್ಬಿಯನ್ನು ಹಸ್ತಾಂತರಿಸಿದೆ.

ಪುನಃ ಮರದ ಮೇಲೇರಿ ಪೌಡರ್ ಕೊಡವಿ ಬೇಗನೆ ಇಳಿದು ಬಂದ. ತಾನು ಸೂಚಿಸಿದಂತೆ ಮರ ಬದಲಾಯಿಸದೇ ಇದ್ದದ್ದಕ್ಕೆ ಕೊಂಚ ನಿರಾಶರಾದ ಕಿಟ್ಟು ಮಾವ, ಈ ಕಡೆ ಇರೋ ಮರಕ್ಕೂ ಸ್ವಲ್ಪ ಹಾಕು.. ಎಲ್ಲಿಯಾದ್ರು ಇದನ್ನೂ ಹತ್ತ ಬೇಕಾಗಿ ಬಂದರೇನು ಮಾಡುವುದು ಎಂದರು. ಇವರೇನು ಧನಿಯೋ ಅಲ್ಲ ಶನಿಯೋ ಅನ್ನುವಂತೆ ಮುಖ ಮಾಡಿಕೊಂಡು ಗೋವಿಂದ, ಕಿಟ್ಟು ಮಾವ ತೋರಿಸಿದ ಮರ ಹತ್ತಿ ಅಲ್ಲಿಯೂ ಪೌಡರ್ ಉದುರಿಸಿದ.

ಬಾಗಿದ ಮರ ಎಲ್ಲಿ ಮನೆಯ ಮೇಲೆ ಬಿದ್ದು ಹೆಂಚುಗಳು ಪುಡಿ ಪುಡಿಯಾದೀತೋ ಎಂಬ ಭಯದಲ್ಲಿ ಗೋವಿಂದನನ್ನು ಕರೆಸಿಕೊಂಡು ಅವನ ವಾಗ್ ಪ್ರವಾಹದಲ್ಲಿ ನಾವು ಸಿಲುಕಿಕೊಂಡಾಗಿತ್ತು. ಹೇಗೋ ಮಾಡಿ ಅವನನ್ನು ಕೆಲಸಕ್ಕೆ ಹಚ್ಚಿದೆವು ಅಂದುಕೊಳ್ಳುತ್ತಿರುವಾಗ ಈ ಕಿಟ್ಟು ಮಾವ ಬಂದು ಸೇರಿಕೊಂಡು ಮಂತ್ರಕ್ಕಿಂತ ಉಗುಳೇ ಹೆಚ್ಚು ಅನ್ನುವ ವಾತಾವರಣ ನಿರ್ಮಾಣವಾಯಿತು. ಇನ್ನು ಭೋಜನ ವಿರಾಮದ ನೆಪದಲ್ಲಿ ಕೆಲಸ ವಿಳಂಬವಾಗುವ ಮುನ್ಸೂಚನೆ ಅರಿತು ನಮ್ಮ ಪತಿರಾಯರು, ''ಗೋವಿಂದ.. ಇವತ್ತು ಏಕಾದಶಿ, ಊಟಕ್ಕೆ ನೀನು ಹೋಟೆಲ್ಲಿಗೆ ಹೋಗಬೇಕಷ್ಟೆ ನಿನಗೆ ಹಸಿವಾಗ್ತಾ ಇಲ್ವಾ.. ಬೇಗ ಒಂದು ಸರ್ತಿ ಕಡಿ ಮಾರಾಯ. ತಡ ಆದ್ರೆ ನೀನು ಊಟದ ಬದಲು ಸಂಜೆಯತಿಂಡಿ ತಿನ್ನಬೇಕಷ್ಟೆ'' ಅಂದರು.


ಈಗ ಗೋವಿಂದ ಗಡಬಡಿಸಿ ಕೆಲಸಕ್ಕೆ ಅನುವಾದ. ಆದರೂ ಕಿಟ್ಟು ಮಾವ ತಮ್ಮ ಅನುಭವದ ಪ್ರಕಾರ ಯಾವ ಕಡೆಯಿಂದ ಮರಕ್ಕೆ ಕೊಡಲಿ ಪೆಟ್ಟು ಬಿದ್ದರೆ ಒಳ್ಳೆಯದು, ಯಾವ ಕಡೆಗೆ ಹಗ್ಗ ಜಗ್ಗಿದರೆ ಕ್ಷೇಮ ಎಂಬ ಬಗ್ಗೆ ಮಾತಾಡತೊಡಗಿದರು. ಕಿಟ್ಟು ಮಾವ ತಮ್ಮ ಬತ್ತಳಿಕೆಯಿಂದ ಬಿಡುತ್ತಿದ್ದ ಇಂತಹ ಬಾಣಗಳನ್ನು, ಗೋವಿಂದ ಸ್ವಯಂ ನಿಪುಣತೆಯಿಂದ ತಾನು ಕಡಿದುರುಳಿಸಿದ ಕಷ್ಟಾತಿಕಷ್ಟ ಮರಗಳ ಅಂಕೆ ಸಂಖ್ಯೆಗಳನ್ನು, ವಿಳಾಸ ಸಹಿತ ಒದಗಿಸುತ್ತಾ ಎದುರಿಸತೊಡಗಿದ.

ಏತನ್ಮಧ್ಯೆ ತಾನು ನಿಗದಿ ಪಡಿಸಿದ ಮರವನ್ನೇ ಏರಿ, ಕಡಿಯಬೇಕಾಗಿದ್ದ ಮರಕ್ಕೆ ಚತುರತೆಯಿಂದ ಹಗ್ಗವನ್ನೆಸೆದು ಕುಣಿಕೆ ಹಾಕಿ ಇಳಿದ. ಹಗ್ಗ ಹಿಡಿದುಕೊಳ್ಳುವವರು ಯಾವ ದಿಕ್ಕಿನಲ್ಲಿ ನಿಂತು ಜಗ್ಗ ಬೇಕು ಎಂಬುದರ ಬಗ್ಗೆ ವಿವರಿಸಿದ. ಆದ್ರೆ ಕಿಟ್ಟು ಮಾವ ಬಿಡಬೇಕಲ್ಲ! ಅದು ಸಮರ್ಪಕವಲ್ಲವೆಂದು ಅವರ ವಾದ. ನಮಗಂತೂ ಇವರ ವಾದ ವಿವಾದ ಕೇಳಿ ತಲೆ ಚಿಟ್ಟು ಹಿಡಿದು ಹೋಗಿತ್ತು. 'ಎಲ್ಲಿಯಾದ್ರೂ ಸರಿ ಒಮ್ಮೆ ಕಡಿ ಮಾರಾಯ' ಎಂಬ ಹುಕುಂ ನಮ್ಮ ಮಾವನವರಿಂದ ಹೊರಟಿತು. ಅಷ್ಟರಲ್ಲಿ ಕಿಟ್ಟುಮಾವ ತಾವು ಹೇಳಿದ ದಿಕ್ಕಿಗೆ ಹಗ್ಗ ಹಿಡಿಯುವವರನ್ನು ನಿಲ್ಲಿಸಿಯಾಗಿತ್ತು. ಗೋವಿಂದ ಸ್ವಲ್ಪ ಕೋಪದಲ್ಲೇ ಮರದ ಮೇಲೆ ಕೊಡಲಿ ಬೀಸಿದ. ಒಂದೆರಡು ಪೆಟ್ಟು ಬಿದ್ದಿತ್ತಷ್ಟೆ. ಒಳಗಿನಿಂದ ಕುಂಬಾಗಿತ್ತೇನೋ ಮರ.. ಕೊಂಚ ಅಲುಗಾಡಿದ ಮರ ತುದಿಯಲ್ಲಿ ಹಗ್ಗ ಕಟ್ಟಿದ ಜಾಗದಿಂದ ಲಟಕ್ಕನೆ ತುಂಡಾಗಿ, ಅಲ್ಲೇ ಮರ ಕಡಿಯುವ ಉಸ್ತುವಾರಿ ಹೊತ್ತಿದ್ದ ಕಿಟ್ಟುಮಾವನ ಕಡೆಗೆ ನೇರವಾಗಿ ಬೀಳಲು ಹೊರಟಿತು. ಹೆದರಿದ ಕಿಟ್ಟುಮಾವ ಅದರಿಂದ ತಪ್ಪಿಸಿಕೊಳ್ಳಲು ಪಕ್ಕಕ್ಕೆ ಹಾರಿ ಅಲ್ಲಿದ್ದ ತೆಂಗಿನ ಹೊಂಡಕ್ಕೆ ಬಿದ್ದರು. ಅಷ್ಟರಲ್ಲಿ ಉಳಿದರ್ಧ ಮರ ಕೊಡಲಿ ಪೆಟ್ಟು ಬಿದ್ದಲ್ಲಿಂದ ತುಂಡಾಗಿ ಮನೆಯ ಮಾಡಿನ ಮೂಲೆಯಲ್ಲಿದ್ದ ಕೆಲವು ಹಂಚುಗಳನ್ನು ಒರೆಸಿ ಪುಡಿ ಮಾಡಿ ನೆಲಕ್ಕೊರಗಿತು. ಈ ಶಬ್ದಕ್ಕೆ, ತನ್ನ ನಿದ್ದೆ ಹಾಳಾದ ಬೇಸರದಲ್ಲಿ ನಮ್ಮ ನಾಯಿ ''ಟೈಗರ್'' ಇಡೀ ಪ್ರಪಂಚಕ್ಕೆ ಕೇಳುವ ಹಾಗೆ ಬೊಗಳತೊಡಗಿತು.

ಇದಾಗಿ ಈಗ ಒಂದೆರಡು ದಿವಸಗಳಾಗಿದೆ. ಕಿಟ್ಟು ಮಾವನಿಗೆ ಕಾಲು ನೋವು ಸ್ವಲ್ಪ ಕಮ್ಮಿಯಾಗಿ ಊರುಗೋಲು ಹಿಡಿದುಕೊಂಡು ನಡೆಯತೊಡಗಿದ್ದಾರೆ. ಆದರೂ ಗೋವಿಂದನ ಮೇಲಿನ ಕೋಪವಿನ್ನೂ ಆರಿಲ್ಲ. ಮನೆಗೆ ಬಂದು ಹೋಗುವವರೊಂದಿಗೆಲ್ಲಾ ಹೇಳಿಕೊಂಡು ಗೋವಿಂದನಿಗೆ ಸಹಸ್ರ ನಾಮಾರ್ಚನೆ ಮಾಡುತ್ತಿದ್ದಾರೆ. ಇತ್ತ ಗೋವಿಂದ, ಕಿಟ್ಟು ಮಾವನ ಮನಸ್ಸಿನಲ್ಲಿ ಮರ ಮಾಡಿನ ಮೇಲೆಯೇ ಬೀಳಬೇಕೆಂದಿತ್ತು, ಇದರಲ್ಲಿ ತನ್ನ ತಪ್ಪೇನೂ ಇಲ್ಲ ಎಂದು ಪ್ರಚಾರ ನಡೆಸುತ್ತಿದ್ದಾನೆ. ನಾವು ಇವರಿಬ್ಬರ ಉಸಾಬರಿಗೆ ಹೋಗದೇ ಮಾಡು ರಿಪೇರಿ ಮಾಡುವವನಿಗೆ ಫೋನಿನ ಮೇಲೆ ಫೋನ್ ಮಾಡಿಕೊಂಡು ಕಾಲ ಕಳೆಯುತ್ತಿದ್ದೇವೆ.

✵

*ಕೊರವಂಜಿಯಿಂದ*




***ಅಂದಿನಂತೆ ಇಂದೂ...***